ಇಸವಿಯಂ ಕರ್ನಾಟಕ ವಿಧಾನಸಭೆ ಸದಸ್ಯರ ಪಕ್ಷಾಂತರ ಆಧಾರದ ಮೇಲೆ ಅನರ್ಹತ ನಿಯಮಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.— ಮಂಡಿಸಲಾಯಿತು. ಇನ್ನು ಮುಂದೆ ವರದಿಗಳನ್ನು ಒಪ್ಪಿಸುವುದು.

ಶ್ರೀ ಎಂ. ವೀರಪ್ಪ ಮೊಯಿಲಿ.— ಅಧ್ಯಕ್ಷರೇ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಈ ಕೆಳಕಂಡ ವರದಿಗಳನ್ನು ಒಪ್ಪಿಸುತ್ತೇನೆ.

೧) ವಾಣಿಜ್ಯ ಹಾಗೂ ಕೈಗಾರಿಕೆ ಇಲಾಖೆಗಳಿಗೆ ಸಂಬಂಧಿಸಿದಂತೆ ೧೯೮೧–೮೨, ೧೯೮೨–೮೩ನೇ ಸಾಲಿನ ಹಣ ವಿನಿಯೋಗ ಮತ್ತು ವಿತ್ತೀಯ ಲೆಕ್ಕಪತ್ರಗಳ ಮೇಲಿನ ಸದರಿ ಸಾಲುಗಳ ಬಗ್ಗೆ ಭಾರತದ ನಿಯಂತ್ರಕ ಮಹಾಲೇಖಾ ಪರೀಕ್ಷಕರ ವರದಿಯ (ಸಿವಿಲ್ ಹಾಗೂ ಕಂದಾಯ) ಮೇಲಿನ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಹತ್ತನೆಯ ವರದಿ.

೨) ಲೋಕೋಪಯೋಗಿ, ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ವಿದ್ಯುಚ್ಛಕ್ತಿ ಇಲಾಖೆಗೆ ಸಂಬಂಧಿಸಿದಂತೆ ೧೯೭೯–೮೦ ಸಾಲಿನಿಂದ ೧೯೮೨–೮೩ ನೇ ಸಾಲಿನವರೆಗಿನ ಹಣಕಾಸು ವಿನಿಯೋಗ ಮತ್ತು ವಿತ್ತೀಯ ಲೆಕ್ಕಪತ್ರಗಳ ಮೇಲಿನ ಸದರಿ ಸಾಲುಗಳ ಬಗ್ಗೆ ಭಾರತದ ನಿಯಂತ್ರಕ ಮಹಾಲೇಖಾ ಪರೀಕ್ಷಕರ ಮೇಲ್ಕಂಡ ಸಾಲುಗಳ ವರದಿಗಳ ಮೇರೆಗೆ (ಸಣ್ಣ ನೀರಾವರಿಗೆ ಸಂಬಂಧಿಸಿದಂತೆ) ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಹತ್ತನೆಯ ವರದಿ.

೩) ೧೯೮೩–೮೪ನೇ ವರ್ಷಗಳಲ್ಲಿನ ಹಣ ವಿನಿಯೋಗ (ಪುರಸ್ಕೃತ ಹಾಗೂ ಮತಕ್ಕೊಳಪಟ್ಟ ಹೆಚ್ಚಿನ ವೆಚ್ಚದ ಬಗ್ಗೆ ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಹನ್ನೊಂದನೆಯ ವರದಿ.

೪) ಕಾಮಗಾರಿ, ಕಾಡ ಮತ್ತು ವಿದ್ಯುಚ್ಛಕ್ತಿ ಇಲಾಖೆಗೆ ಸಂಬಂಧಿಸಿದಂತೆ ೧೯೭೯ ಹಾಗೂ ೧೯೮೨–೮೩ನೇ ಸಾಲುಗಳ ಹಣ ವಿನಿಯೋಗ ಮತ್ತು ವಿತ್ತೀಯ ಲೆಕ್ಕಗಳ ಹಾಗೂ ಭಾರತದ ನಿಯಂತ್ರಿತ ಮಹಾಲೇಖ ಪರೀಕ್ಷಕರ ಮೇಲ್ಕಂಡ ಸಾಲುಗಳ (ಸಿವಿಲ್) ವರದಿಗಳ ಮೇರೆಗೆ(ಕೃಷ್ಣಾ ಮೇಲ್ದಂಡೆಗೆ ಸಂಬಂಧಿಸಿದಂತೆ)

ಅಧ್ಯಕ್ಷರು.— ಮಂಡಿಸಲಾಯಿತು.

ಅಧ್ಯಕ್ಷರು.— ಇನ್ನು ಮುಂದೆ ಸಾರ್ವಜನಿಕ ಮಹತ್ವದ ವಿಷಯಗಳಿಗೆ ಗಮನ ಸೆಳೆಯುವ ಸೂಚನೆಗಳು.

ಶ್ರೀ ಎಸ್. ಬಂಗಾರಪ್ಪ.— ಅದಕ್ಕಿಂತ ಮುಂಚೆ

ಅಧ್ಯಕ್ಷರು.— ಬಂಗಾರಪ್ಪನವರೇ, ನೀವುಕಳುಹಿಸಿದ್ದ ಅಜರ್ನಮೆಂಟ್ ಮೋಷನನ್ನು ಕಾಲಿಂಗ್ ಅಟೆನ್‌ಷನ್ನಾಗಿ ಪರಿವರ್ತಿಸಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.— ಅದು ನಮಗೇನೂ ಗೊತ್ತಾಗಲಿಲ್ಲ. ಏನೇ ಇರಲಿ...

ಅಧ್ಯಕ್ಷರು.— ಮಾನ್ಯ ಬಂಗಾರಪ್ಪನವರೇ ನೀವು ಮಾತನಾಡ ಹೊರಡುವುದವು ಯಾವ ರೂಲ್ಸಿ,, ಏನು ವಿಚಾರ. ನನಗೆ ಎರಡು ಅಜರ್ನಮೆಂಟ್ ಮೋಷನ್ ಬಂದಿದ್ದವು. ಆ ಪೈಕಿ ಎರಡನೆಯದನ್ನು ಕಾಲಿಂಗ್ ಅಟೆನ್‌ಷನ್ ಮಾಡಿ ನಾಳೆಗೆ ಇಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.— ಕಾಲಿಂಗ್ ಅಟೆನ್‌ಷನ್ನಾಗಿ ಮಾಡುವುದಕ್ಕೆ ತಮಗೆ ಅಧಿಕಾರ ಇದೆ ಹಾಗೆ ತಾವು ಮಾಡಿರುವುದನ್ನು ಒಪ್ಪಿದರೂ ಕೂಡ...

ಅಧ್ಯಕ್ಷರು.—ದಯವಿಟ್ಟು ತಾವು ಕುಳಿತುಕೊಳ್ಳಿ. ನೀವು ಕಳುಹಿಸಿದ್ದನ್ನು ನಾನು ನೇರವಾಗಿ ರಿಜೆಕ್ಟ್ ಮಾಡಬಹುದಿತ್ತು. ಆದರೆ ಹಾಗೆ ಮಾಡದೆ ನಾಳೆಗೆ ಇಟ್ಟಿದ್ದೇನೆ.

ಶ್ರೀ ಧರ್ಮಸಿಂಗ್.— ಇನ್ನಷ್ಟು ವಿಚಾರಗಳ ಬಗ್ಗೆ ಚರ್ಚೆ ಮಾಡಬೇಕು ಸ್ವಾಮಿ ನಾವು ಇಲ್ಲಿ ?

ಅಧ್ಯಕ್ಷರು.— ಕಾಲಿಂಗ್ ಅಟೆನ್‌ಷನ್ ಮಾಡಿರುವುದರ ಬಗ್ಗೆ ಈಗಾಗಲೇ ಇಂಟಿಮೇಷನ್ ಕೊಟ್ಟಿದ್ದೇನೆ. ಇಂಟಿಮೇಷನನ್ನು ನಿಮ್ಮ ನಾಯಕರಿಗೆ ಕಳುಹಿಸಿಕೊಡಲಾಗಿದೆ.

ಶ್ರೀ ಧರ್ಮಸಿಂಗ್.— ಗುಲ್ಬರ್ಗ ತಾಲ್ಲೂಕು ಆಳಂದ್‌ನಲ್ಲಿ ಗೋಲಿಬಾರಾಗಿದೆ. ಇದಕ್ಕಿಂತ ಮುಖ್ಯ ಇನ್ನಾವುದು ?

ಅಧ್ಯಕ್ಷರು.— ದಯವಿಟ್ಟು ಕುಳಿತುಕೊಳ್ಳಿ. ಬಂಗಾರಪ್ಪನವರೇ ನೀವೂ ಕುಳಿತುಕೊಳ್ಳಿ. ಏಕೆಂದರೆ ಇದನ್ನು ನೇರವಾಗಿ ನಾನು ರಿಜೆಕ್ಟ್ ಮಾಡಬಹುದಿತ್ತು. ಆದರೆ ಸಾರ್ವಜನಿಕರ ಹಿತಾಸಕ್ತಿಯಿಂದ ನಿಮ್ಮನ್ನು ನಾನು ಚೇಂಬರಿಗೂ ಕರೆಸದೆಯೇ ಕಾಲಿಂಗ್ ಅಟೆನ್‌ಷನ್ನಾಗಿ ಪರಿವರ್ತಿಸಿದ್ದೇನೆ.

ಶ್ರೀ ಧರ್ಮಸಿಂಗ್.— ರಾಮನಗರದಲ್ಲಿ, ಆಳಂದ್‌ನಲ್ಲಿ, ಗೋಲಿಬಾರ್ ಆಗಿದೆ. ಇಡೀ ಕರ್ನಾಟಕದಲ್ಲೇ ಆಗಿದೆ. ಆದ್ದರಿಂದ ಇದನ್ನು ಪ್ರಯಾರಿಟಿ ಮೇಲೆ ಚರ್ಚೆ ಮಾಡಲು ತಾವು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.— ಅಮೇಲೆ ಚೇಂಬರಿಗೆ ಬನ್ನಿ, ಮಾತನಾಡೋಣ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸಭಾಧ್ಯಕ್ಷರೇ, ನಾವು ಅಡಜರ್ನಮೆಂಟ್ ಮೋಷನ್ ಕಳುಹಿಸಿರುವವರು ಯಾರು ಯಾರು ಎಂಬುದು ಸೂಚನೆಯಲ್ಲಿಯೇ ಇದೆ. ಅದನ್ನು ನೀವು ಗಮನಿಸಿಯೇ ಸೂಚನೆಯಾಗಿ ಕನ್‌ಫರ್ಟ್ ಮಾಡಿರುವುದು ನಮಗೆಲ್ಲಾ ನಿಮ್ಮಿಂದಲೇ ಬರಬೇಕಾಗಿತ್ತು. ಹಾಗೆ ಯಾರಿಗೂ ಒಂದಿಲ್ಲ. ಬದಲಿಗೆ ನಮ್ಮ ನಾಯಕರಿಗೆ ಅದನ್ನು ಕಳಿಸಿಕೊಟ್ಟಿರುವುದಾಗಿ ಹೇಳಿದಿರಿ. ಅದಕ್ಕೇನು ಕಾರಣ ಎಂಬುದು ಯಾರಿಗೂ ಗೊತ್ತಾಗಲಿಲ್ಲ. ಇದು ಮೊದಲಿನದು. ಎರಡನೆಯದೆಂದರೆ ಕರ್ನಾಟಕದಲ್ಲಿ ನಡೆಯಂಬಹುದಾದ ಸಾರ್ವಜನಿಕರಿಗೆ ಸಂಬಂಧಿಸಿದ ಯಾವುದೇ ವಿಷಯಗಳನ್ನು ಈ ಸದನದಲ್ಲಿ ಎತ್ತುವುದು ಈ ಮನೆಯ ಸದಸ್ಯರಿಗಿರುವ ಹಕ್ಕು. ಅದನ್ನು ಪ್ರತಿಪಾದನೆ ಮಾಡಿಯೇ ನಾವು ಇತ್ತೀಚಿನ ಕೆಲವು ಘಟನೆಗಳ ಬಗ್ಗೆ ಇಲ್ಲಿ ನಿಲುವಳಿ ಸೂಚನೆ ತರಲು ಪ್ರಯತ್ನಿಸಿದಾಗ ಅದರ ಹಿನ್ನೆಲೆಯಲ್ಲಿ ತಾವು ಅದನ್ನು ಒಪ್ಪುವ ಸಾಧ್ಯತೆಗಳು. ತಮಗೆ ಅದು ಮನವರಿಕೆಯಾಗುವುದು ಎಂಬ ಪೂರ್ವಭಾವನೆ ಇದ್ದವು. ಆದ್ದರಿಂದ ಅದನ್ನು ತಾವು ಹಾಗೆಯೇ ಉಳಿಸಬೇಕಾಗಿತ್ತು. ಅಲ್ಲದೆ ಇಲ್ಲಿನ ನಿಯಮಾವಳಿ ಪ್ರಕಾರವೇ ಅದನ್ನು ಕಳಿಸಿಕೊಟ್ಟಿದ್ದೇವೆ. ಹಿಂದೆ ಎಷ್ಟೋ ಸಲ ಅಜರ್ನಮೆಂಟ್ ಮೋಷನ್ ಅನ್ನು ಬೇರೆಯದಕ್ಕೆ ಪರಿವರ್ತನೆ ಮಾಡಿದ ಮೇಲೂ ವಿಷಯದ ಗಹನತೆ ಅರಿತಂ ಮತ್ತೆ ಅಜರ್ನಮೆಂಟ್ ಮೋಷನ್ನಾಗೇ ರೀಕನ್ಸ್ಟರ್ಟ್ ಮಾಡಿ ಚರ್ಚೆ ಮಾಡಿರುವುದು ಬೇಕಾದಷ್ಟು ಇದೆ. ತಾವು ಸದಸ್ಯರಾಗಿದ್ದಾಗ ಹೇಗೆ ಆಗಿರುವುದನ್ನು ನೋಡಿರುತ್ತೀರಿ. ಈ ದೃಷ್ಟಿಯಿಂದ ನಾವು ಕಳುಹಿಸಿದ್ದ ವಿಷಯವು ಹೆಚ್ಚಿನ ಪ್ರಾಮುಖ್ಯವಾಗಿರದಿದ್ದರೆ ನಿಜವಾಗಿಯೂ ಅದನ್ನು ನಾವು ನಿಲುವಳಿ ಸೂಚನೆಯಾಗಿ ಕಳುಹಿಸುತ್ತಿರಲಿಲ್ಲ. ನಾನು ಹೇಳುವುದನ್ನು ತಾವು ಒಪ್ಪಿದ್ದೀರೆಂದು ಭಾವಿಸಿದ್ದೇನೆ, ಏಕೆಂದರೆ ಅದು ಸಾರ್ವಜನಿಕರ ಹಿತದೃಷ್ಟಿಯಿಂದ ಬಹಳ ಪ್ರಾಮುಖ್ಯವಾದುದು ಇದರ ಮಹತ್ವ ನಿಮಗೇ ಮೊದಲೇ ಸ್ಪಷ್ಟವಾಗಿದ್ದಿದ್ದರೆ ಅದನ್ನು ಗಮನ ಸೆಳೆಯುವ ಸೂಚನೆಯಾಗಿ ಪರಿವರ್ತಿಸುತ್ತಿರಲಿಲ್ಲ ಎಂಬುದು ನನ್ನ ಭಾವನೆ. ಆದ್ದರಿಂದ ಇದನ್ನು ಜರೂರಾತಿಯಾದ ವಿಷಯ ಎಂದು ಪರಿಗಣಿಸಿ ಈ ಸದನದ ಎಲ್ಲಾ ವಿಚಾರಗಳನ್ನೂ ಕೂಡ ಮುಂದೂಡಿ ಅವಕಾಶ ಮಾಡಿ ಕೊಡಬೇಕೆಂದು ಕೋರುತ್ತೇನೆ.

ಇವೊತ್ತು ರಾಮನಗರದಲ್ಲಿ ಗೋಲಿಬಾರಾಗಿದೆ. ಗುಲ್ಬರ್ಗದ ಆಳಂದ್‌ನಲ್ಲಿ ಗೋಲಿಬಾರಾಗಿದೆ. ಈಗ ನಾನು ಆ ಏವರಗಳಿಗೆ ಹೋಗುವುದಿಲ್ಲ. ನಿಲುವಳಿ ಸೂಚನೆಗೆ ತಾವು ಅವಕಾಶ ಮಾಡಿಕೊಡಬೇಕೆಂದು ಪೂರ್ವಭಾವಿಯಾಗಿ ತಮ್ಮ ಅನುಮತಿ ಪಡೆಯುವುದಕ್ಕೋಸ್ಕರ ಇಷ್ಟೆಲ್ಲವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದನ್ನು ತಾವು ಗಂಭೀರವಾಗಿ ಪರಿಗಣಿಸುತ್ತೀರೆಂದು ಭಾವಿಸಿದ್ದೇನೆ. ಈ ದೃಷ್ಟಿಯಿಂದ ನಾವು ಏಳೆಂಟು ಜನ ಮಾನ್ಯ ಸದಸ್ಯರು ಇದಕ್ಕೆ ಸಹಿ ಹಾಕಿ ಕಳುಹಿಸಿದ್ದೇವೆ.

ಅಧ್ಯಕ್ಷರು.— ನನ್ನ ಕ್ರಮವನ್ನು ರೀಕನ್‌ಸಿಡರ್ ಮಾಡಿ ಎನ್ನುತ್ತಿದ್ದೀರಲ್ಲವೇ ?

ಶ್ರೀ ಎಸ್. ಬಂಗಾರಪ್ಪ — ಆದ್ದರಿಂದ ಮಾನ್ಯ ಸದಸ್ಯರ ಹಕ್ಕುಗಳಿಗೆ ತಾವು ರಕ್ಷಣೆ ಕೊಡಬೇಕಾಗುತ್ತದೆ, ತಾವು ಅನುಭವಸ್ಥರು. ಆದ್ದರಿಂದ ಹೆಚ್ಚಿಗೆ ನಾನು ವಿವರ ಕೊಡಲಂ ಹೋಗುವುದಿಲ್ಲ. ಬರಿ ಪೂರ್ವಪೀಠಿಕೆಯಾಗಿ ಇದನ್ನು ಹೇಳಿದ್ದೇನೆ.

ಅಧ್ಯಕ್ಷರು.— ಆಯಿತು ರೂಲಿಂಗ್ ಕೊಡುತ್ತೇನೆ. ನೀವು ಇಗಲೇ ರೀ ಕನ್‌ಸಿಡರ್ ಮಾಡಿ ಎಂದು ಹೇಳಿದ್ದೀರಿ.

I have converted it into Calling Attention Motion ಎಂದು ಆಗಲೇ ಹೇಳಿದ್ದೇನೆ. ನನಗೆಲ್ಲಾ ಅರ್ಥವಾಗಿದೆ. ಈಗ ನೀವು ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.— ಕನ್‌ಸಿಡರ್ ಮಾಡಲಿಕ್ಕೆ ಏನೇನು ರೀಸನ್ಸ್ ಇವೆ ಅದನ್ನು ಇನ್ನೂ ನಾನು ಹೇಳಿಲ್ಲ. ದಯವಿಟ್ಟು ಸ್ವಲ್ಪ ತಾವು ಆಲಿಸಬೇಕು. ನಾನು ಕೊಡುವ ರೀಸನ್ಸ್‌ನಿಂದ ತಮಗೂ ಅನುಕೂಲ, ನನಗೂ ಅನುಕೂಲ. ಹೀಗೆಯೇ ಮಾಡಬೇಕೆಂದು ನಾನೇನೂ ನಿರ್ಬಂಧ ಹೇರುತ್ತಿಲ್ಲ. ತವಗೆ, ತಮ್ಮ ಪೀಠಕ್ಕೆ ಅಪಾರ ಗೌರವವಿಟ್ಟು ಮಾತನಾಡುತ್ತಿದ್ದೇನೆ. ಆ ಹಿನ್ನೆಲೆಯಲ್ಲಿ ಏಕೆ ತಮ್ಮನ್ನು ರೀ ಕನ್‌ಸಿಡರ್ ಮಾಡಿ ಎಂದು ಕೇಳುತ್ತಿದ್ದೇನೆಂದರೆ...

ಶ್ರೀ ಎ. ಲಕ್ಷ್ಮೀಸಾಗರ್.— ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು.— ಮಾನ್ಯ ಮಂತ್ರಿಗಳು ಪಾಯಿಂಟ್ ಆಫ್ ಆರ್ಡರ್ ಇದೆಯೆಂದು ಹೇಳುತ್ತಿದ್ದಾರೆ ತಾವು ಕುಳಿತುಕೊಳ್ಳಿ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೆ, ನನ್ನ ಕ್ರಿಯಾಲೋಪ ಏನೆಂದರೆ ಅವರು ಕೊಟ್ಟ ರತಕ್ಕ ನೋಟೀಸ್‌ಗೆ ತಾವು ತಮ್ಮ ತೀರ್ಮಾನವನ್ನು ಕೊಟ್ಟಿದ್ದೀರಿ. ಅಡ್ಜರ್ನ್‌ಮೆಂಟ್ ಮೋಷನ್ ನೋಟೀಸ್ ಅನ್ನು ಅವರು ಏನು ಕೊಟ್ಟಿದ್ದಾರೆ ನಾನು ಅದನ್ನು ಪರಿಶೀಲನೆ ಮಾಡಿ ಕಾಲಿಂಗ್ ಅಟೆನ್‌ಷನ್ ಆಗಿ ಕನ್ವರ್ಟ್ ಮಾಡಿದ್ದೇನೆಂದೂ ತಾವು ಹೇಳಿದ್ದೀರಿ. ತಮ್ಮ ಕೊನೆಯ ತೀರ್ಮಾನವನ್ನು ಕೊಟ್ಟಿದ್ದೀರಿ. ಅದರ ಜೊತೆಗೆ ತಮ್ಮ ತೀರ್ಮಾನಕ್ಕೆ ಪೂರಕವಾಗಿ ತಾವು ಹೇಳಿದ್ದೀರಿ. ಇದು ಪೋಲೀಸ್ ಮ್ಯಾಟರ್ಸ್ ಇದೆ, ಲಾ ವಿಷಯಗಳು ಇವೆ ಅವುಗಳನ್ನು ಅಡ್ಜರ್ನ್‌ಮೆಂಟ್ ನೋಟೀಸ್ ಮೂಲಕ ಈ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ ಎನ್ನತಕ್ಕ ತೀರ್ಮಾನಗಳು ಈ ಸಭೆಯಲ್ಲಿ ಈಗಾಗಲೇ ಉಲ್ಲೇಖಿನ ಗಳಾಗಿವೆ ಎನ್ನುವ ಈ ವಿಷಯವನ್ನು ತಾವೂ ಹೇಳಿದ್ದೀರಿ. ಇದು ಆದಮೇಲೆ ನನಗೆ ಅವಕಾಶ ಕೊಡಿ ನಾನು 'ಇದರ ಮೇಲೆ ಮಾತನಾಡುತ್ತೇನೆ ಎಂದರೆ ಹೇಗೆ ? ತಾವು ತಮ್ಮ ಕೊನೆಯ ತೀರ್ಮಾನವನ್ನು ಕೊಡತಕ್ಕ ಸಂದರ್ಭದಲ್ಲಿ ಇದನ್ನು ಬದಲಾಯಿಸತಕ್ಕ ಒಂದು ಮನಸ್ಸನ್ನು ತಾವು ತೋರಿಸಿಲ್ಲ. ಕಾಲಿಂಗ್ ಅಟೆನ್‌ಷನ್ ಮುಖಾಂತರ ಅವರು ಚರ್ಚೆ ಮಾಡುವುದಕ್ಕೆ ಅವಕಾಶವಿದೆ. ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇದೆ. ತಾವು ಇದಕ್ಕೂ ಪೂರ್ವಭಾವಿಯಾಗಿ ತಿರಸ್ಕಾರ ಮಾಡಬಹುದಾಗಿತ್ತು ಆ ಅಧಿಕಾರ ತಮಗಿದೆ, ಅದನ್ನು ತಾವು ಮಾಡಿಲ್ಲ. ಇದು ಅಡ್ಜರ್ನ್‌ಮೆಂಟ್ ಮೋಷನ್ ಆಗುವುದಿಲ್ಲ ವೆಂದು ತಿರಸ್ಕಾರ ಮಾಡಬಹುದಾಗಿತ್ತು. ಅದನ್ನು ಮಾಡದೇ ಅಷಕ್ಕೆ ಬೇರೊಂದು ರೂಪವನ್ನು ಕೊಟ್ಟು ಸೌಜನ್ಯ ಪೂರ್ಣವಾಗಿ ಕಾಲಿಂಗ್ ಅಟೆನ್‌ಷನ್‌ಗೆ ಪರಿವರ್ತನೆ ಮಾಡಿ, ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಮಾಡಿ ಕೊಟ್ಟಿದ್ದೀರಿ. ಆದರೂ ನಾನು, ಇದನ್ನೇ ಹೇಳುತ್ತೇನೆ, ಇದನ್ನೇ ಹೇಳುತ್ತೇನೆ. ಅದರ ಬಗ್ಗೆ ತಾವು ಲಾಲಿಸಬೇಕು ಎಂದರೆ ಕಾನೂನಿನ ಚೌಕಟ್ಟಿನಲ್ಲಿ ಅದಕ್ಕೆ ಅವಕಾಶವಿಲ್ಲ. ತಮ್ಮ ತೀರ್ಮಾನ ಕೊನೆಯ ತೀರ್ಮಾನ. ಆದ್ದರಿಂದ ತಮ್ಮ ತೀರ್ಮಾನದಂತೆ ತಾವು ಸಭೆಯನ್ನು ನಡೆಸಿ ಕೊಂಡು ಹೋಗತಕ್ಕದ್ದು ಸರಿ ಕಾನೂನಿನ ನಿಯಮಂಗಳ ಪಟ್ಟಿಯ ಕಕ್ಷೆಯಲ್ಲಿ ಏನೇನು ಬರುತ್ತದೆ ಅದನ್ನಿ ಯಾವ ಸದಸ್ಯರು ವಿರೂ ಹೋಗಬಾರದೆಂದು ನಾನು ನನ್ನ ಕ್ರಿಯಾಲೋಪವನ್ನು ಮಂಡಿ ಸಂತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಏನೆಂದರೆ ನಾನು ಬೇರೆ ರೀತಿಯಲ್ಲಿ ಹೇಳುತ್ತಿದ್ದೇನೆ. ನಾನೊಂದು ಅಡ್ಜರ್ನ್‌ಮೆಂಟ್ ಮೋಷನ್ ನೋಟೀಸ್ ಅನ್ನು ಕಳುಹಿಸಿದ್ದೇನೆ. ಬೆಂಗಳೂರು ನಗರದಲ್ಲಿ ಆಲೆಂಬಿಕ್ ಗ್ಯಾಸ್ ಕಾರ್ಖಾನೆಯ ಕೆಲವು ಕಾರ್ಮಿಕರು ಸತ್ತುಹೋಗಿದ್ದಾರೆ. ಅದರ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಆದನ್ನು ತಾವು ಕಾಲಿಂಗ್ ಅಟೆನ್‌ಷನ್‌ಗೆ ಕನ್ವರ್ಟ್ ಮಾಡಿದ್ದೇನೆಂದು ಹೇಳುತ್ತಿದ್ದೀರಿ. ನಾನು ತಮ್ಮ ತೀರ್ಮಾನವನ್ನು ಪ್ರಶ್ನೆ ಮಾಡುತ್ತಿಲ್ಲ. ತಮ್ಮ ತೀರ್ಮಾನ ಬರುವುದಕ್ಕೆ ಮುಂಚೆ ತಾವು ಎಲ್ಲಾ ಮಾಹಿತಿಗಳನ್ನು ತರಿಸಿಕೊಂಡು ನಂತರ ಅದರ ಬಗ್ಗೆ ತೀರ್ಮಾನ ಕೊಡುವುದು ಸರಿಎನ್ನುವ ಅಭಿಪ್ರಾಯಗಳು ಹಿಂದೆ ಆಗಿವೆ. ತಾವು ರೂಲ್ ನಂ. ೬೩ ಅದನ್ನು ನೋಡಿ ಅದರಲ್ಲಿ ಏನಿದೆ ಅಂದರೆ,

"63(1) The Speaker, if he gives consent under rule 60 and holds that the matter proposed to be discussed is in order, shall after the questions and before the list of business is

entered upon, call the member concerned who shall raise in his place and ask for leave to move the adjournment of the House.

Provided that where the Speaker has refused his consent under rule 59 or is of opinion that the matter proposed to be discussed is not in order, he may, if he thinks it necessary, read the notice of motion and state the reasons for refusing consent or holding the motion as not being in order.

Provided further that where the Speaker is not in possession of full facts about the matter mentioned therein, he may before giving or refusing his consent read the notice of the motion and hear from the Minister and or members concerned a brief statement of facts and then give his decision on the admissibility of the motion."

ಮಾನ್ಯ ಬಂಗಾರಪ್ಪನವರು ಮಂತ್ರಿಗಳು ಏನು ಕೊಟ್ಟಿದ್ದಾರೆಂಬುದು ನನಗೆ ಗೊತ್ತಿಲ್ಲ. ನಾನು ಮಂತ್ರಿ ಮಾನ್ಯ ಪಂಪಾಪತಿಯವರು ಕೊಟ್ಟಿರತಕ್ಕ ನಿಲುವಳಿ ಸೂಚನೆ ಏನಿದೆ ಅದರಲ್ಲಿ ಎಲ್ಲಾ ವಿವರಗಳನ್ನು ಕೊಟ್ಟಿಲ್ಲ. ಆದರೆ ಇದನ್ನು ನಿಲುವಳಿ ಸೂಚನೆ ಆಗಿ ತೆಗೆದುಕೊಳ್ಳುವುದಕ್ಕೆ ಸಾಧ್ಯತೆ ಇದೆ ಎನ್ನುವುದನ್ನು ತಿಳಿದುಕೊಂಡು ಕೆಲವು ಅಂಶಗಳನ್ನು ಹೇಳಿದ್ದೇವೆ. ನಾನು ಹೇಳಿರುವ ಅಂಶಗಳು ಇಷ್ಟೆ, ಬೆಂಗಳೂರು ನಗರದಲ್ಲಿ ಅಲೆಂಬಿಕ್ ಗ್ಲಾಸ್ ಫ್ಯಾಕ್ಟರಿಯ ಕಾರ್ಮಿಕರು ಹಸಿವಿನಿಂದ ಸತ್ತಿದ್ದಾರೆ ಮತ್ತು ಮನೆಯಲ್ಲಿದ್ದ ಪಾತ್ರೆ ಪಗಡಿಗಳೆಲ್ಲ ಮಾರ್ವಾಡಿ ಅಂಗಡಿಗಳಿಗೆ ಹೋಗಿವೆ. ನಾನು ಇನ್ನು ಹೆಚ್ಚು ವಿವರಗಳಿಗೆ ಹೋಗುವುದಿಲ್ಲ. ತಾವು ಅನುಮತಿ ಕೊಟ್ಟರೆ ಹೆಚ್ಚು ವಿವರಗಳಿಗೆ ಹೋಗುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಬಂಗಾರಪ್ಪನವರು ರೈಸ್ ಮಾಡಿದ ಸಬ್ಜೆಕ್ಟ್ ಬೇರೆ ಮಾನ್ಯ ಕೃಷ್ಣನ್‌ರವರು ರೈಸ್ ಮಾಡುತ್ತಿರುವ ಸಬ್ಜೆಕ್ಟ್ ಬೇರೆ.

ಶ್ರೀ ಕೆ. ಎಚ್. ಪಾಟೀಲ್.— ಮಾನ್ಯ ಸಭಾಧ್ಯಕ್ಷರೆ, Unless that Point of Order is disposed off how another Point of Order can be allowed ?

ಶ್ರೀ ಎಂ. ಎಸ್. ಕೃಷ್ಣನ್.— ಪಾಯಿಂಟ್ ಆಫ್ ಆರ್ಡರ್‌ಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ರೂಲ್ ೬೩ನ್ನು ತಮ್ಮ ಗಮನಕ್ಕೆ ತೆಗೆದುಕೊಂಡು ಬಂದಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ಕೃಷ್ಣನ್‌ರವರು ಎತ್ತಿದಂಥ ವಿಚಾರದ ಮೇಲೆ ಮಾನ್ಯ ಸದಸ್ಯರಾದ ಬಂಗಾರಪ್ಪನವರು ಮಾತನಾಡುತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಬಂಗಾರಪ್ಪನವರು ಎತ್ತಿರತಕ್ಕ ವಿಷಯಕ್ಕೆ ಬೆಂಬಲವಿದೆ. ತಾವು ಅವರು ಹೇಳುವುದನ್ನು ಕೇಳಿ, ನಾವು ಹೇಳುವುದನ್ನು ಕೇಳಿ ಆಮೇಲೆ ತಮ್ಮ ತೀರ್ಮಾನ ಕೊಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ಅಧ್ಯಕ್ಷರೆ, ಮಾನ್ಯ ಕಾನೂನು ಸಚಿವರಾದ ಲಕ್ಷ್ಮೀ ಸಾಗರ್‌ರವರು ಎತ್ತಿದ-ತಹ ಪಾಯಿಂಟ್ ಆಫ್ ಆರ್ಡರ್ ಮೇಲೆ ನಾನು ಮಾತನಾಡುತ್ತೇನೆ. ಮಾನ್ಯ ಸದಸ್ಯರಾದ ಬಂಗಾರಪ್ಪನವರು ನಿಲುವಳಿ ಸೂಚನೆಯ ಬಗ್ಗೆ ಆವರು ಪ್ರಸ್ತಾಪ ಮಾಡಿದ್ದಾರೆ. ಬಹುಶಃ ಪ್ರಸ್ತಾಪ ಮಾಡಬೇಕಾದ ಅವಶ್ಯಕತೆ ಏತಕ್ಕೆ ಬಂತು ಎಂಬುದನ್ನು ತಾವು ಮನವರಿಕೆ ಮಾಡಿಕೊಳ್ಳಬೇಕು. ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಹೇಳಿದರು, ನಿಲುವಳಿ ಸೂಚನೆಗೆ ಎಂದು ತಮಗೆ ನೋಟೀಸ್ ಕೊಟ್ಟ ಮೇಲೆ ಯಾವ ಒಂದು ತೀರ್ಮಾನವನ್ನು ತಾವು ತೆಗೆದುಕೊಳ್ಳುವುದಕ್ಕೆ ತಮಗೆ ಹಕ್ಕು ಇದೆ. ಅದು ತಮ್ಮ ಸಾರ್ವಭೌಮತ್ವ ಅದನ್ನು ನಾವು ಪ್ರಶ್ನೆ ಮಾಡುವುದಿಲ್ಲ. ಅದನ್ನು ನಿಭಾಯಿಸತಕ್ಕ ವಿಚಾರದಲ್ಲಿ ಮಾನ್ಯ ಸದಸ್ಯರು ನಿಯಮವನ್ನು ಓದಿ ಹೇಳಿದ್ದಾರೆ ಅದನ್ನು ನಾನು ಪುನರುಚ್ಚರಿಸಲಿಕ್ಕೆ ಹೋಗುವುದಿಲ್ಲ. ರೂಲ್ ೬೩(೧) ಅದರ ಪ್ರಕಾರ ಅನುಸರಿಸಬೇಕಾದ ವಿಚಾರ ಮತ್ತು ಅಂಥ ಸದಸ್ಯರು ತನ್ನ ಸ್ಥಾನದಲ್ಲಿ ಎದ್ದುನಿಂತು ಸದನದಲ್ಲಿ ನಿಲುವಳಿ ಸೂಚನೆಯನ್ನು ತರಲು

ಅನುಮತಿ ಕೇಳತಕ್ಕದ್ದು ಇದೆ. ಆ ಸಂದರ್ಭದಲ್ಲಿ ಮಾನ್ಯ ಸದಸ್ಯರು ಎದ್ದು ಮಾತನಾಡಿದ್ದಾರೆ. ಆ ವಿಚಾರಕ್ಕೆ ಮತ್ತೆ ಬರುತ್ತೇನೆ. ಇದರ ಮೇಲೆ ಮಾನ್ಯ ಕಾನೂನು ಸಚಿವರು ಏನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ ಆ ವಿಧಿ ಬಿಂದುವಿನ ಪ್ರಶ್ನೆ ಇಲ್ಲಿ ಬರುವುದಿಲ್ಲ. ಅವರು ನಾನು ಎತ್ತಿದ್ದೆ ಸರಿ ಎನ್ನುವುದಾದರೆ We have not entered into a business ಜೀರೊ ಅವರ್‌ನಲ್ಲಿ ಈ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರೂ It is in a vacuum ವ್ಯಾಕ್ಯೂಂ ತಾವು ನೋಡಿರಬಹುದು. ಹಿಂದಿನ ಪರಂಪರೆಗಳನ್ನು ನೋಡಿ, ವಿಧಿ ಬಿಂದು ಯಾವಾಗ ಬರುತ್ತದೆ ? When we enter into the business, ನಾನು ನಿಯಮಗಳ ಪ್ರಕಾರ ಹೋಗದಿದ್ದರೆ, ನಿಯಮವನ್ನು ಸರಿದಾರಿಗೆ ತರಲಿಕ್ಕೆ ವಿಧಿಬಿಂದು ಎತ್ತತಕ್ಕದ್ದು ಸರಿ. ವಿಧಿ ಬಿಂದುವನ್ನು ಎತ್ತಿ ಸಮರ್ಪಕ ಸ್ಪಷ್ಟೀಕರಣ ಕೊಡತಕ್ಕ ಒಂದು ಪ್ರಮೇಯ ಸದನದಲ್ಲಿ ಬಂದದ್ದೆ ಇಲ್ಲ. ವಿಧಿ ಬಿಂದು ಎತ್ತುವುದಕ್ಕೆ ಈಗ ಅವಕಾಶವಿರಲಿಲ್ಲ. ಅನೇಕ ಸಾರಿ ಸಭಾಧ್ಯಕ್ಷರು ಅಪ್ಪಣೆ ಕೊಡುವುದರಲ್ಲೂ ಒಂದು ಪರಂಪರೆಯನ್ನು ಹಾಕಿಕೊಂಡು ನಡೆಸಿಕೊಂಡು ಬಂದಿದ್ದಾರೆ. ತಾವು ಕಾನೂನು ಸಚಿವರು, ನಿಯಮಗಳನ್ನು ತಿಳಿದು ವಿಧಿ ಬಿಂದು ಇದೆಯೆಂದು ಮಾನ್ಯ ಸದಸ್ಯರು ಎತ್ತಿದಂತಹ ವಿಷಯಕ್ಕೆ ಚ್ಯುತಿ ತರತಕ್ಕದ್ದು ಸರಿಯಲ್ಲ. ವಿಧಿ ಬಿಂದು ಇದೆಯೆಂದು ಹೇಳಿ ಅವರು ಹೇಳುವುದನ್ನು ಮೊಟಕುಗೊಳಿಸುವುದಕ್ಕೆ ನಿಯಮಾವಳಿಗಳನ್ನು ಓದಿ ಉತ್ತರ ಕೊಡಬೇಕಾಗಿಲ್ಲ. ವಿಧಿ ಬಿಂದು ಹೇಳುವ ಸಾಹಸಕ್ಕೆ ಮಾನ್ಯ ಕಾನೂನು ಸಚಿವರು ಹೋಗುವುದು ಬೇಡ. ವಿಧಿ ಬಿಂದುವಿನ ವಿಚಾರದಲ್ಲಿಯೇ ನಾನು ಹೇಳುತ್ತೇನೆ. ಮಾನ್ಯ ಅಧ್ಯಕ್ಷರು ಇದನ್ನು ವಿಚಾರ ಮಾಡಬೇಕು. ಇಲ್ಲಿ ವಿಧಿ ಬಿಂದು ಎತ್ತಲಿಕ್ಕೂ ಅವಕಾಶ ಇರಲಿಲ್ಲ. ಈ ಪ್ರಾವಿಸೋ ಪ್ರಕಾರ ತಾವು ತಮ್ಮ ಅಪ್ಪಣೆಯನ್ನು ನಮಗೆ ಇನ್ನು ಕೊಟ್ಟಿಲ್ಲ. ತಾವು ತಮ್ಮ ಅಪ್ಪಣೆಯನ್ನು ಯಾವಾಗ ಕೊಡಲಿಲ್ಲವೊ ಆಗ We are still in 63(1) ನಿಯಮ ೬೩ರ ಪ್ರಕಾರ ಅಪ್ಪಣೆ ಕೊಡದಿದ್ದರೆ, ಮಾನ್ಯ ಸದಸ್ಯರು ಹೇಳತಕ್ಕ ಪ್ರಶ್ನೆ ಇರಲಿಲ್ಲ. ನಾನು ಹೇಳತಕ್ಕ ಪ್ರಶ್ನೆಯೂ ಇರಲಿಲ್ಲ. ಇಲ್ಲಿ ತಾವು ನಿಲುವಳಿ ಸೂಚನೆಯನ್ನು ಕನ್ವರ್ಟ್ ಮಾಡಿದ್ದೇನೆಂದು ಅಪ್ಪಣೆ ಕೊಟ್ಟಿದ್ದೀರಿ. ಉದ್ದೇಶಿಸಿರುವ ವಿಷಯವು ಕ್ರಮಬದ್ಧವಾಗಿಲ್ಲವೆಂದು ಅಭಿಪ್ರಾಯ ಪಟ್ಟರೆ, ತಾನು ಅವಶ್ಯವೆಂದು ಭಾವಿಸಿದರೆ, ಎಂದರೆ ಆ ಭಾವನೆಯನ್ನು ವ್ಯಕ್ತಮಾಡ ಬೇಕೆಂದು ನಾವು ಎದ್ದಿದ್ದೇವೆ. ಅಧ್ಯಕ್ಷರು ೬೦ನೇ ನಿಯಮದ ಮೇರೆಗೆ ತನ್ನ ಒಪ್ಪಿಗೆ ನೀಡಲು ನಿರಾಕರಿಸಿದರೆ ಅಥವಾ ಚರ್ಚೆಸಲು ಉದ್ದೇಶಿಸಿರುವ ವಿಷಯವು ಕ್ರಮಬದ್ಧವಾಗಿಲ್ಲವೆಂದು ಅಭಿಪ್ರಾಯಪಟ್ಟರೆ ತಾನು ಅವಶ್ಯವೆಂದು ಭಾವಿಸಿದರೆ ಏನು ಮಾಡಬೇಕೆಂದು ಇದೆಯೋ ಅದರ ಪ್ರಕಾರ ಆ ಒಂದು ಹಂತದಲ್ಲಿ ಮಾನ್ಯ ಸದಸ್ಯರು ಎದ್ದು ನಿಂತಿದ್ದಾರೆ. ತಾವು ಪರಾಂಭರಿಸುವುದಕ್ಕೆ ಮುಂಚೆ ಸಂಬಂಧಪಟ್ಟ ಸದಸ್ಯರು ತಮ್ಮ ಸ್ಥಾನದಲ್ಲಿ ಎದ್ದು ನಿಂತಿದ್ದಾರೆ. ಆ ಒಂದು ಸ್ಟೇಜ್‌ನಲ್ಲಿ ಎದ್ದು ನಿಂತಿದ್ದಾರೆ. Once a Member rises on his seat, the permission is implied that he can present. ತಾವು ಏನು ಕನ್ವರ್ಟ್ ಮಾಡತಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ ಅದು ತಮ್ಮ ಔದಾರ್ಯವನ್ನು ತೋರಿಸುತ್ತದೆ. We are thankful for that. ಆದರೆ ಆ ಬಗ್ಗೆ ಆಡ್ಜರ್ಮೆಂಟ್ ಮೋಷನ್ ಉಪಯೋಗ, ಅದರ ಪ್ರಾಮುಖ್ಯತೆ ಅದರ ಗಾಂಭೀರ್ಯತೆ ಅದರ ಯಂತ್ರಾಯುಕ್ತತೆ ಏನಿದೆ ಅದನ್ನು ಸ್ಪಷ್ಟವಾಗಿ ತಾವು ತಮ್ಮ ಮಾತಿನ ಮುಖಾಂತರ ಹೇಳಿದ್ದರೆ ಸದಸ್ಯರಿಗೆ ಇದ್ದಂತಹ ಹಕ್ಕು ಇಲ್ಲದಂತಾಗುತ್ತದೆ.

ಅದನ್ನು ಗಮನಕ್ಕೆ ತೆಗೆದುಕೊಂಡೇ ಈ ಸದನದ ಕಾರ್ಯಕಲಾಪಗಳನ್ನು ನಾವು ನಡೆಸುತ್ತಿದ್ದೇವೆ ಏಕೆಂದರೆ, ನಮ್ಮ ಸನ್ಮಾನ್ಯ ಸದಸ್ಯರಾದ ಎಂ. ಎಸ್. ಕೃಷ್ಣನ್‌ರವರು ಬಹಳ ಸ್ಪಷ್ಟವಾಗಿ ಹೇಳಿದರಂ. ಅದು ಇರತಕ್ಕ ನಿಯಮದ ಪ್ರಕಾರ ಒಂದು ಸ್ಪಷ್ಟೀಕರಣಕ್ಕೆ ಅವಕಾಶ ಇರಬೇಕೆಂಬ ವಿಚಾರವನ್ನೇ ಸನ್ಮಾನ್ಯ ಸದಸ್ಯರಾದ ಎಂ. ಎಸ್. ಕೃಷ್ಣನ್‌ರವರು ಹೇಳಿದ್ದಾರೆ. ನಿಯಮ ೬೩ರ (೧) ಉಪನಿಯಮದ ಪ್ರಕಾರ,

> ''ಪರಂತು, ಅಧ್ಯಕ್ಷರು ೬೦ನೇ ನಿಯಮದ ಮೇರೆಗೆ ತನ್ನ ಒಪ್ಪಿಗೆ ನೀಡಲು ನಿರಾಕರಿಸಿದರೆ ಅಥವಾ ಚರ್ಚಿಸಲು ಉದ್ದೇಶಿಸಿರುವ ವಿಷಯವು ಕ್ರಮಬದ್ಧವಾಗಿಲ್ಲವೆಂದು ಅಭಿಪ್ರಾಯಪಟ್ಟರೆ ತಾವು ಅವಶ್ಯವೆಂದು ಭಾವಿಸಿದರೆ, ನಿಲುವಳಿ ಸೂಚನೆಯನ್ನು ಓದಿ ಹೇಳಬಹುದು ಮತ್ತು ತಾನು ನಿಲುವಳಿ ಸೂಚನೆಯನ್ನು ತರಲು ಒಪ್ಪಿಗೆಯನ್ನು ನಿರಾಕರಿಸುವುದರ ಹಾಗೂ ನಿಲುವಳಿ ಸೂಚನೆ ಕ್ರಮಬದ್ಧವಾಗಿಲ್ಲವೆಂದು ಅಭಿಪ್ರಾಯಪಟ್ಟ ಕಾರಣಗಳನ್ನು ತಿಳಿಸಬಹುದು.''

ಇದಂ ಯಾವುದನ್ನೂ ತಾವು ಮಾಡಲಿಲ್ಲ. ಅದನ್ನು ಪರಿವರ್ತನೆ ಮಾಡಿ ನಮಗೆ ಅವಕಾಶ ಮಾಡಿ ಕೊಟ್ಟಿದ್ದೀರಿ. ನಮ್ಮ ಸನ್ಮಾನ್ಯ ಸಚಿವರು ಏನು ಹೇಳಿದರು ಎಂದರೆ ಇದಂ ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಪಟ್ಟ ಸಾಮಾನ್ಯವಾದ ವಿಚಾರ ಎಂದು, ಅದು ಸರಿ. ಆದರೆ ಜವಾಬ್ದಾರಿಯುತ ವಾದ ಸದಸ್ಯರು ಅದನ್ನು ಅರ್ಥಮಾಡಿಕೊಂಡೇ ಈ ನಿಲುವಳಿ ಸೂಚನೆಯನ್ನು ತಂದಿರುತ್ತಾರೆ. ಅದನ್ನು ತಾವು ಗವಂನ ಸೆಳೆಯುವ ಸೂಚನೆಯೂಗಿ ಪರಿವರ್ತನೆ ಮಾಡಬಹುದು. ಆಥವಾ ಬೇರೆ ರೂಪದಲ್ಲೆ ಮಾಡಬಹುದು. ಆದರೆ ನಿಲುವಳಿ ಸೂಚನೆಯನ್ನು ಕೊಡುವಾಗ, ಸದಸ್ಯರಂ ಅದರ ಗಂಭೀರತೆಯನ್ನು ಆರ್ಥೈಸಿ, ಅದನ್ನು ಸ್ಪಷ್ಟವಾಗಿ ತಿಳಿದುಕೊಂಡೇ ಇದನ್ನು ತರುವುದು ತಮಗೂ ಗೊತ್ತಿದೆ. ಸರ್ಕಾರದವರು ಏನು ಮಾಡಿದ್ದಾರೆ ಎಂಬುದಂ ತಮಗೆ ಗೊತ್ತಿದೆ. ಸಂವಿಧಾನದ ಪ್ರಕಾರ ೬ ತಿಂಗಳಿ ಗೊಮ್ಮೆ ಮಾತ್ರ ಸದನವನ್ನು ಕರೆಯಬೇಕಂ ಎಂದು ಇದೆ. ಈಗ ಮಾತ್ರ ಸದನವನ್ನು ಕರೆಯಬೇಕೆಂಬ ನಿಲುವನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ. ಮುತೀಯ ಗಲಭೆಯಾಗಲಿ, ಊರೇ ಹೋಗಲಿ, ಏನೇ ಆಗಲಿ, ಏನೇ ಘಟನೆ ನಡೆಯಲಿ, ವಿಚಲಿತರಾಗದೆ ದೊಡ್ಡ ಬಂಡೆಗಲ್ಲಿನಂತೆ, ಯಾವುದೇ ಪರಿಣಾಮ ಇಲ್ಲದೆ, ಭಾವನೆಗಳು ಇಲ್ಲದೆ ರಾಜ್ಯಭಾರ ಮಾಡಿಕೊಂಡು ಹೋಗತಕ್ಕ ಪರಿಪಾಠವನ್ನು ನಮ್ಮ ಮುಂದೆ ಇವರಂ ಇಟ್ಟಿದ್ದಾರೆ. ಆ ಪ್ರಶ್ನೆ ಪ್ರತ್ಯೇಕ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಇಲ್ಲಿ ವಿಷಯಾಂತರವಾಗುತ್ತಿದೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.— ಇದನ್ನು ತಾವು ಮರೆಯಬಾರದು, ಕಳೆದ ಮಾರ್ಚಿ ತಿಂಗಳಲ್ಲಿ ಮುಂದೂಡಿದಂತಹ ಸದನ ಆಗಸ್ಟ್ ೧೫ನೇ ತಾರೀಖಿು, ಇವೊತ್ತು ಸೇರಂತ್ತು ಇದೆ.

ಅಧ್ಯಕ್ಷರು.—ಇನ್ನು ಸಾಕು, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ದಯಮಾಡಿ ವಿಷಯವನ್ನು ಕೇಳಬೇಕು. ಯಾವುದೇ ನಿಲುವಳಿ ಸೂಚನೆಯನ್ನು ತಂದಾಗ, ಮೊದಲು ಪ್ರಿಲಿಮಿನರಿ ಚರ್ಚೆ ನಡೆಯುವುದಕ್ಕೆ ತಾವು ಅವಕಾಶ ಕೊಡುತ್ತೀದ್ದಿರಿ. ಅದೊಂದು ಪರಂಪರೆ ಕೂಡ.

ಅಧ್ಯಕ್ಷರು.—ವಿಚಾರವನ್ನು ಹೇಳಿದ್ದೀರಿ. ನಾನೂ ತಿಳಿದುಕೊಂಡಿದ್ದೇನೆ. ನೀವು ಹೇಳಿದ್ದನ್ನೂ ಕೇಳಿದ್ದೇನೆ. ಸಾಕು ಮುಕ್ತಾಯ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಹೇಳತಕ್ಕಂಥದ್ದಕ್ಕೂ ತಾವು ಅವಕಾಶ ಕೊಡದಿದ್ದರೆ ಏನಾಗುತ್ತದೆಂದರೆ, ತಾವು ನೋಡಬೇಕು. ಬೇರೆ ಹೇಳುವುದು ಇದೆ. ಕಾನೂನಂ ಮತ್ತು ಸುವ್ಯವಸ್ಥೆಯ ಪ್ರಶ್ನೆ ಇದೆ. ರಾಮನಗರದಲ್ಲಿ, ಬೆಳಗಾಂನಲ್ಲಿ, ಮತ್ತು ಆಳಂದ್‌ನಲ್ಲಿ ಮತೀಯ ಅಲ್ಪಸಂಖ್ಯಾತರು ಇರಬಹುದು. ಭಾಷಾ ಅಲ್ಪಸಂಖ್ಯಾತರಂ ಇರಬಹುದು, ಅಲ್ಪಸಂಖ್ಯಾತರ ಒಂದು ಗಂಭೀರವಾದ ಪ್ರಶ್ನೆ ಇರುವುದರಿಂದ ಇವೊತ್ತು ನಿಲುವಳಿ ಸೂಚನೆಯನ್ನು ಮಾನ್ಯ ಸದಸ್ಯರು ತಂದಿದ್ದಾರೆ .

ಅಧ್ಯಕ್ಷರು.—ಅದು ನನಗ ಗೊತ್ತಿದೆ. ಪಾಯಿಂಟ್ ಆಫ್ ಆರ್ಡರ್‌ಗೆ ಉತ್ತರ ಕೊಡಬೇಕು ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಎಲ್ಲಿದೆ ಪಾಯಿಂಟ್ ಆಫ್ ಆರ್ಡರ್ ?

(ಗೊಂದಲ)

ಗೋಲೀಬಾರ್ ಆಗಿದೆ. ಜನ ಸತ್ತಿದ್ದಾರೆ, ಗಂಭೀರ ಪರಿಸ್ಥಿತಿ ಇದೆ, ರಾಜ್ಯದಲ್ಲಿ ಕಾನೂನೇ ಇಲ್ಲ. ಸರಿಯಾದ ಆಡಳಿತ ಯಂತ್ರ ಇಲ್ಲಿ ಇಲ್ಲ, ಇದು ಬರೀ ಕಾನೂನು ಮತ್ತು ಸುವ್ಯವಸ್ಥೆಯ ಪ್ರಶ್ನೆ ಅಷ್ಟೇ ಅಲ್ಲ. ಅವರ ಜೀವನ ಭದ್ರತೆಯ ವಿಚಾರದಲ್ಲಿ, ಅವರ ಆಸ್ತಿಯ ಭದ್ರತೆಯ ವಿಚಾರದಲ್ಲಿ ಈ ಪ್ರಶ್ನೆ ಬಂದಿದೆ. ಜನ ಸತ್ತಿದ್ದರೂ ಕೂಡಾ ಸರ್ಕಾರ ಬಂಡೆಗಲ್ಲಿನಂತೆ ಇದ್ದರೆ ಏನು ಹೇಳುವುದು ? ಸಂವಿಧಾನದ ನಿಯಮದ ಪ್ರಕಾರ ಇವೊತ್ತು ಸದನ ಸೇರಂತ್ತಿದೆ. ಇಂತಹ ಪ್ರಾಮುಖ್ಯವಾದ ವಿಚಾರವನ್ನು ಪ್ರಸ್ತಾಪ ಮಾಡದೆ, ಬೇರೆ ಯಾವ ವಿಷಯವನ್ನು ಚರ್ಚೆ ಮಾಡಬೇಕು ?

ಅಧ್ಯಕ್ಷರು.—ನಿಮ್ಮ ಉದ್ದೇಶವನ್ನು ಮೊಟುಕುಗೊಳಿಸಬೇಕೆಂಬುದು ನನ್ನ ಉದ್ದೇಶ ಅಲ್ಲ. ಅದಕ್ಕೋಸ್ಕರ, ಅದನ್ನು ಕನ್ವರ್ಟ್ ಮಾಡಿ, ನಾಳೆಯೇ ಗಮನ ಸೆಳೆಯುವ ಸೂಚನೆ ಎಂದು ಇಟ್ಟಿದ್ದೇನೆ. ಇದನ್ನೇ ನಾನು ನೇರವಾಗಿ ರಿಜೆಕ್ಟ್ ಮಾಡಿ, ಸುಮ್ಮನೆ ಕೂಡಬಹುದಿತ್ತಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಆ ರೀತಿ ಮಾಡುವುದಿಲ್ಲ ಎಂದು ನಮಗೆ ಗೊತ್ತಿತ್ತು. ನಮ್ಮನ್ನು ಕೇಳಿ ರಿಜೆಕ್ಟ್ ಮಾಡುತ್ತೀರಿ ಎಂದು ಗೊತ್ತು.

ಅಧ್ಯಕ್ಷರು.—ನೀವು ಆ ಬಗ್ಗೆ ನನ್ನನ್ನು ಕನ್ವಿನ್ಸ್ ಮಾಡಬೇಕಾದರೆ, ನನ್ನ ಛೇಂಬರ್‌ಗೆ ಬಂದು ಕನ್ವಿನ್ಸ್ ಮಾಡಿ You cannot convince me here. There is a clear cut ruling. ಎಲ್ಲರೂ ಕುಳಿತುಕೊಳ್ಳಿ. ನನಗೆ ರೂಲ್ಸ್ ಕೂಡ ಗೊತ್ತಿದೆ. ನೀವು ಈ ರೀತಿ ಎಲ್ಲರೂ ಎದ್ದು ನಿಂತು ಮಾತನಾಡುವುದಾದರೆ, Nothing will go on record. ಆ ಪಾಯಿಂಟ್‌ನ್ನು ನೀವು ನನಗೆ ಕನ್ವಿನ್ಸ್ ಮಾಡಬೇಕಾದರೆ, ನನ್ನ ಛೇಂಬರ್‌ಗೆ ಬಂದು ಕನ್ವಿನ್ಸ್ ಮಾಡಿ. ಅಲ್ಲಿಯವರೆಗೆ ಮಾನ್ಯ ಸಚಿವರು ಎತ್ತಿರತಕ್ಕ ಪಾಯಿಂಟ್ ಆಫ್ ಆರ್ಡರ್‌ಗೆ ಉತ್ತರ ಕೊಡಬೇಕು. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ —ಮಾನ್ಯ ಸಭಾಧ್ಯಕ್ಷರೆ. ತಾವು ದಯಮಾಡಿ ಕೇಳಿ, ಇದು ಬರೀ ನಾವು ಕೂಡತಕ್ಕಂತಹ ಪ್ರಶ್ನೆಯಲ್ಲ.

ಅಧ್ಯಕ್ಷರು.—ಮಾನ್ಯ ಸಚಿವರು ಎತ್ತಿರತಕ್ಕಂತಹ ಪಾಯಿಂಟ್ ಆಫ್ ಆರ್ಡರ್‌ಗೆ ನಾನು ನನ್ನ ರೂಲಿಂಗ್‌ನ್ನು ಕೊಡಬೇಕೋ, ಕೊಡಬಾರದೋ ?

ಶ್ರೀ ಎಸ್. ಬಂಗಾರಪ್ಪ.—ನಿಲುವಳಿ ಸೂಚನೆಯನ್ನು ನಾವು ಕಳುಹಿಸಿಕೊಟ್ಟ ಮೇಲೆ ಅದರ ಬಂದ ತಕ್ಷಣ...

ಅಧ್ಯಕ್ಷರು.—ನೀವು ದಯಮಾಡಿ ಕುಳಿತುಕೊಳ್ಳಬೇಕು. ಅವರ ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಏನು ಹೇಳುವುದು ಹೇಳಿ ? ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ, ಅದಕ್ಕೆ ನನ್ನ ರೂಲಿಂಗ್‌ನ್ನು ಕೊಡುತ್ತೇನೆ.

ಶ್ರೀ ಪಂಪಾಪತಿ.—ಪಾಯಿಂಟ್‌ಗೂ, ಆರ್ಡರ್‌ಗೂ ಗುಂಡು ಹಾರಿಸಿದ್ದಾರೆ. ಅದರ ಬಗ್ಗೆ ಚರ್ಚೆಯಾಗುತ್ತಿದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ದಯಮಾಡಿ ನಾನು ಹೇಳುವುದನ್ನು ಕೇಳಿ.

ಅಧ್ಯಕ್ಷರು.—ಅವರ ಪಾಯಿಂಟ್ ಆಫ್ ಆರ್ಡರ್‌ಗೆ ರೂಲಿಂಗ್ ಕೊಡಬೇಕೋ ಬೇಡವೊ ?

ಶ್ರೀ ಎಸ್. ಬಂಗಾರಪ್ಪ.—ಅದಕ್ಕೆ ರೂಲಿಂಗ್ ಕೊಡುವುದಕ್ಕಿಂತ ಮೊದಲು ಮಾನ್ಯ ಸದಸ್ಯರುಗಳು ಅಭಿಪ್ರಾಯವನ್ನು ಎರಡೂ ಕಡೆಯಿಂದ ಕೇಳಿ, ಇದು ತಪ್ಪು ರೂಲಿಂಗ್‌ಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಬೇರೆ ಯಾವ ದೃಷ್ಟಿಯಿಂದಲೂ ನಾನು ಹೇಳುತ್ತಿಲ್ಲ.

ಶ್ರೀ ಜೆ. ನಾರಾಯಣ ಕುಮಾರ್.— ಶ್ರೀಮಾನ್ ಬಂಗಾರಪ್ಪನವರು ಈಗಲೂ ಪ್ರತಿಪಕ್ಷದ ನಾಯಕರೇ ? ತಮ್ಮ ತೀರ್ಪನ್ನು ಗಮನಿಸದೇ ವಿಷಯಾಂತರ ಮಾಡಿ ಮಾತನಾಡುತ್ತಿದ್ದಾರೆ. ಅವರು ಈಗಲೂ ಪ್ರತಿ ಪಕ್ಷದ ನಾಯಕರಾಗಿದ್ದಾರೆಯೇ ?

(ಗೊಂದಲ)

ಅಧ್ಯಕ್ಷರು.—ಈ ರೀತಿ ಮಾತನಾಡಿದರೆ ಯಾರು ಏನು ಹೇಳಿದರೂ ರೆಕಾರ್ಡಿಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಕಾನೂನು ಸಚಿವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ, ಅದಕ್ಕೆ ರೂಲಿಂಗ್ ಕೊಡುತ್ತೇನೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈ ತರಹ ಮಾಡಿದರೆ ಹೇಗೆ?

ಶ್ರೀ ಎಸ್. ಬಂಗಾರಪ್ಪ.—ಈ ರೀತಿ ತಾವು ಒಂದೇ ಸಾರಿ ಸಂಪೂರ್ಣವಾಗಿ ಅಂತಿಮ ತೀರ್ಮಾನಕ್ಕೆ ಬರುವುದು ಬೇಡ. ದಯಮಾಡಿ ನಾನು ಹೇಳುವುದಕ್ಕೆ ಕೇಳಿ.

ಅಧ್ಯಕ್ಷರು.—ದಯವಮಾಡಿ ಕುಳಿತುಕೊಳ್ಳಿ. ನೀವು ತಿಳವಳಿಕೆಯುಳ್ಳವರು, ನಿಮಗೂ ಹೇಳಬೇಕೆ ?

ಶ್ರೀ ಎಸ್. ಬಂಗಾರಪ್ಪ.—ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಉದ್ದೇಶ ಇಷ್ಟೆ. ಈ ಒಂದು ನಿಲುವಳಿ ಸೂಚನೆಯನ್ನು ಸದನದಲ್ಲಿ ತಂದರೆ, ಪೂರ್ವಭಾವಿಯಾಗಿ ವಿಚಾರವನ್ನು ಹೇಳ ತಕ್ಕಂಥದ್ದು, ಅಲ್ಪಸ್ವಲ್ಪ ವಿಚಾರ. ಸಂಪೂರ್ಣವಾಗಿ ಹೇಳಬೇಕು ಎಂದು ನಾನು ಹೇಳುತ್ತಿಲ್ಲ. ಕೇಳತಕ್ಕಂತಹ ಅವಕಾಶವನ್ನು ತಾವು ಎಷ್ಟೋ ಸಾರಿ ಮಾಡಿಕೊಟ್ಟಿದ್ದೀರಿ ? ಇದಕ್ಕೆ ಆನುವು ಮಾಡಿ ಕೊಟ್ಟಿದ್ದೀರಿ. ತಮ್ಮ ಬಗ್ಗೆ ಅಭಿಮಾನದಿಂದ ಎಷ್ಟೋ ಸಾರಿ ಹೇಳಿದ್ದೀರಿ. ಎಷ್ಟೋ ಸಾರಿ ನಮಗೆ ರಕ್ಷಣೆಯನ್ನೂ ಕೊಟ್ಟಿದ್ದೀರಿ. ಆದರೆ ಈ ಸಾರಿ ನಿಲುವಳಿ ಸೂಚನೆಯನ್ನು ತಂದ ತಕ್ಷಣ ಹಿಂದೆ ನಡೆದಂತಹ ರೀತಿಯಲ್ಲಿ ಆಗಲಿಲ್ಲ ಆ ದೃಷ್ಟಿಯಿಂದ ಈ ವಿಚಾರವನ್ನು ನಾನು ಹೇಳುತ್ತಾ ಇರುವುದು.

ಅಧ್ಯಕ್ಷರು.—ಅದನ್ನು ರೀ ಕನ್ಸಿಡರ್ ಮಾಡಿ ಎಂದು ತಾನೆ ತಾವು ಹೇಳುತ್ತಿರುವುದು, ನೀವು ನನ್ನ ಛೇಂಬರ್‌ಗೆ ಬಂದು ಕನ್ವಿನ್ಸ್ ಮಾಡಿ. ಚರ್ಚೆ ಮಾಡಿ ಒಂದು ಅಂತಿಮ ತೀರ್ಮಾನಕ್ಕೆ ಬರೋಣ.

ಶ್ರೀ ಎಸ್. ಬಂಗಾರಪ್ಪ.—ನಮ್ಮ ಅಭಿಪ್ರಾಯ ಇಷ್ಟೆ. ಪೂರ್ವಭಾವಿಯಾಗಿ ವಿಚಾರವನ್ನು ಹೇಳುವುದಕ್ಕೆ ೫ ನಿಮಿಷ ಅವಕಾಶ ಕೊಡಿ. ಆಷ್ಟರಲ್ಲಿ ಹೇಳಬೇಕಾದ ವಿಚಾರವನ್ನು ಹೇಳ ಮುಂಗಿಸುತ್ತೇವೆ. ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳತಕ್ಕಂತಹ ಆಸಕ್ತಿ ನಮಗೆ ಇಲ್ಲ. ಆ ದೃಷ್ಟಿಯಿಂದ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಹೇಳತಕ್ಕಂಥಹ ವಿಚಾರವನ್ನು ಸಂಕ್ಷಿಪ್ತ ವಾಗಿ ಹೇಳುವುದಕ್ಕೆ ತಾವು ಅವಕಾಶ ಮಾಡಿಕೊಡಿ. ನಂತರ ಯಾವುದೇ ನಿಲುವನ್ನು ತಾವು ತಾಳಿ, ತೀರ್ಪನ್ನು ಹೇಳಿ.

೧-೫೦ ಪಿ. ಎಂ.

ತಮ್ಮ ತೀರ್ಪನ್ನು ಪ್ರಶ್ನೆ ಮಾಡತಕ್ಕ ಆಸ್ತಕಿ ನಮಗೆ ಸ್ವಲ್ಪವೂ ಇಲ್ಲ, ಈ ದೃಷ್ಟಿಯಿಂದ ಇವತ್ತು ನಾನು ನಿಲುವಳಿ ಸೂಚನೆಯನ್ನು ತಮ್ಮ ಮೂಲಕ ಕಳುಹಿಸಿಕೊಟ್ಟಿದ್ದೇನೆ. ಅದು ತಮ್ಮ ನಿಲುವನ್ನು ಪುನರ್ ವಿಮರ್ಶೆ ಮಾಡತಕ್ಕ ವಿಚಾರ ಇರಬಹುದು ಅಥವಾ ಹೊಸದಾಗಿ ಪ್ರಸ್ತಾಪ ಮಾಡುವ ವಿಚಾರ ಇರಬಹುದಾ, ಅದು ತಮಗೆ ಬಿಟ್ಟದ್ದು. ರಾಮನಗರದಲ್ಲಿ, ಆಳಂದದಲ್ಲಿ ಗೋಲೀ ಬಾರ್ ನಡೆದಿರತಕ್ಕದ್ದು ಮಾನ್ಯ ಬೊಮ್ಮಾಯಿಯವರಿಗೆ ಗೊತ್ತಿದೆ.....

ಅಧ್ಯಕ್ಷರು.—ಒಂದು ಕ್ರಿಯಾಲೋಪಕ್ಕೆ ರೂಲಿಂಗ್ ಕೊಡದೆ ಮತ್ತೊಂದು ಕ್ರಿಯಾಲೋಪಕ್ಕೆ ಅವಕಾಶ ಕೊಡುವುದು ಹೇಗೆ ?

ಶ್ರೀ ಜಿ. ನಾರಾಯಣ ಕುಮಾರ್.—ಈಗಲೂ ಬಂಗಾರಪ್ಪನವರು ಪ್ರತಿ ಪಕ್ಷದ ನಾಯಕರೆ ?

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಇವರಿಗೆ ಸ್ವಲ್ಪವಾದರೂ ಘನತೆ ಗೌರವ ಬೇಡವೆ ?

(ಗೊಂದಲ)

ಅಧ್ಯಕ್ಷರು.—ಈ ಸಮಯದಲ್ಲಿ ಮಾತನಾಡಿದ್ದರು ರೆಕಾರ್ಡಿಗೆ ಏನೂ ಹೋಗುವುದಿಲ್ಲ. ಎಲ್ಲರೂ ದಯವಮಾಡಿ ಕುಳಿತುಕೊಳ್ಳಿ. ನಾನು ಮೊದಲು ಕ್ರಿಯಾಲೋಪಕ್ಕೆ ಉತ್ತರಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ತಾವು ಒಂದೇ ಸಾರಿ ಈ ರೀತಿ ಸಿಟ್ಟಿಗೆ ಹೋದರೆ ಹೇಗೆ ?

ಅಧ್ಯಕ್ಷರು.—ನನಗೆ ಸಿಟ್ಟೇನು ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಹೇಳುವುದನ್ನು ಕೇಳಿ, ಸರಿಯಿಲ್ಲವೆಂದರೆ ತಳ್ಳಿ ಹಾಕಿ.

(ಗೊಂದಲ)

ಅಧ್ಯಕ್ಷರು.—ಈಗ ಯಾರು ಏನು ಮಾತನಾಡಿದರೂ ಅದು ರೆಕಾರ್ಡಿಗೆ ಹೋಗುವುದಿಲ್ಲ. ಈಗ ನಾನು ಪಾಯಿಂಟ್ ಆಫ್ ಆರ್ಡರಿಗೆ ಉತ್ತರಿಸಬೇಕು. ಬಂಗಾರಪ್ಪನವರೆ, ನೀವು ಹೇಳಿದ್ದನ್ನು ಕೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ನಾನು ವಿಷಯವನ್ನೇ ಪ್ರಸ್ತಾಪ ಮಾಡಿಲ್ಲ.....

(ಗೊಂದಲ)

ಅಧ್ಯಕ್ಷರು.—ಯಾರು ಏನು ಹೇಳಿದರೂ ರೆಕಾರ್ಡ್ ಆಗುವುದಿಲ್ಲ. ಏಕೆಂದರೆ ನಾನು ಹೇಳುವುದನ್ನು ಕೇಳುವುದಕ್ಕೆ ನೀವು ತಯಾರಿಲ್ಲವಲ್ಲ, ರೂಲಿಂಗ್ ಕೊಡುವುದಕ್ಕೆ ಮೊದಲು ನಾನು ಏನು ಹೇಳುತ್ತೇನೆಂದರೆ, ರೂಲ್ಸ್‌ನಲ್ಲಿ, ಪ್ರೊಸೀಜರ್‌ನಲ್ಲಿ ಏನಿದೆ ಎಂದರೆ.....

(ಗೊಂದಲ)

MR. SPEAKER.—Nothing will go on record.

ನಾನು ಎದ್ದು ನಿಂತಾಗ ತಾವು ಕುಳಿತುಕೊಳ್ಳಬೇಕು. ರೂಲಿಂಗ್ ಕೊಡುವುದಕ್ಕೆ ಮೊದಲು ನಾನು ಹೇಳುವುದು ಇಲ್ಲಿನ ಒಂದು ಕನ್‌ವೆನ್‌ಷನ್‌ನಂತೆ, ಆಕಸ್ಮಾತ್ತಾಗಿ ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟದ್ದನ್ನು ರಿಜೆಕ್ಟ್ ಮಾಡಿದ್ದೇನೆಂದು ತಿಳಿಸಿದರೆ ಅದು ಪ್ರೈಮಾಫೈಸಿ ಇದೆ ಅದಕ್ಕೆ ಅವಕಾಶ ಕೊಡಿ ಎಂದು ಹೇಳುವುದು ಅಥವಾ ಏನಾದರೂ ಕನ್‌ವಿನ್ಸ್ ಮಾಡುವುದು ಇದ್ದರೆ ರೂಲ್ಸ್ ಪ್ರಕಾರ ಛೇಂಬರಿಗೆ ಬನ್ನಿ ಎಂದು ಹೇಳುತ್ತೇನೆ. ನೀವು ಅಲ್ಲಿ ಬಂದು ಕನ್‌ವಿನ್ಸ್ ಮಾಡಬೇಕೇ ಹೊರತು ಇಲ್ಲಿ ಕನ್‌ವಿನ್ಸ್ ಮಾಡುವುದಕ್ಕಾಗುವುದಿಲ್ಲ. ನಾನು ಇನ್ನೂ ಪಾಯಿಂಟ್ ಆಫ್ ಆರ್ಡರಿಗೆ ರೂಲಿಂಗ್ ಕೊಟ್ಟಿಲ್ಲ, ಕೊಡುವುದಕ್ಕೆ ಮೊದಲು ಏನು ಹೇಳುತ್ತೇನೆಂಬುದನ್ನು ಕೇಳಿ.

ಶ್ರೀ ಎಸ್. ಬಂಗಾರಪ್ಪ —ರೂಲಿಂಗ್ ಕೊಡಿ, ಬೇಡ ಎಂದು ಹೇಳುವುದಿಲ್ಲ. ಆದರೆ ಈ ವಿಚಾರ ಚರ್ಚೆಗೆ ತಪ್ಪಿ ಛೇಂಬರಿಗೆ ಬರತಕ್ಕದ್ದು ಅಲ್ಲ, ಅದನ್ನು ಸದನದಲ್ಲೇ ಪ್ರಸ್ತಾಪ ಮಾಡಬೇಕಾಗಿದೆ. ರಾಮನಗರ, ಆಳಂದ, ಬೆಳಗಾಂನಲ್ಲಿ ಗೋಲೀಬಾರ್ ನಡೆದಿದೆ ಎಂದರೂ ಅವಕಾಶ ಕೊಡುವುದಿಲ್ಲವೆಂದರೆ..... ...

(ಗೊಂದಲ)

MR. SPEAKER.—Nothing will go on record.

ದಯವಿಟ್ಟು ಕುಳಿತುಕೊಳ್ಳಬೇಕು. ಸರ್ಕಾರ ಏನು ಹೇಳುತ್ತದೆ ಕೇಳೋಣ ತಾಳಿ.

(ಗೊಂದಲ)

MR. SPEAKER.—Nothing will go on record.

ಶ್ರೀ ಎಸ್. ಆರ್. ಬೊಮ್ಮಾಯಿ.—ನನಗೆ ಸ್ವಲ್ಪ ಅವಕಾಶ ಕೊಡಿ, ಹೇಳುತ್ತೇನೆ.....

(ಗೊಂದಲ)

ಅಧ್ಯಕ್ಷರು.—ಸರ್ಕಾರದವರು ಏನು ಹೇಳುತ್ತಾರೆ, ಸ್ವಲ್ಪ ಕೇಳೋಣ ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ,.....

(ಗೊಂದಲ)

ಅಧ್ಯಕ್ಷರು.—ಮಾನ್ಯ ಬೊಮ್ಮಾಯಿಯವರು ಮಾತನಾಡಲಿ, ನಾನು ಮಾನ್ಯ ಮಂತ್ರಿಗಳಿಗೆ ಕರೆದಿದ್ದೇನೆ. ಅವರು ಏನು ಹೇಳುತ್ತಾರೋ ಕೇಳೋಣ.

(ಗೊಂದಲ)

MR. SPEAKER.—Nothing will go into the record.

(ಗೊಂದಲ)

ಶ್ರೀ ಎಂ. ವಿಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ತಾವು ಮಾತಾಡುವಾಗ ಏನು ಹೇಳಿದಿರಿ ಎಂದರೆ ನಮ್ಮನ್ನು ಈ ವಿಷಯದ ಬಗ್ಗೆ ಛೇಂಬರ್‌ಗೆ ಬಂದು ಕನ್‌ವಿನ್ಸ್ ಮಾಡಬಹುದು ಎಂದು ಸುತ್ತು ಈಗಾಗಲೇ ಇದರ ಬಗ್ಗೆ ಒಂದು ನಿರ್ಣಯಕ್ಕೆ ಬಂದಿದ್ದೇನೆ ಎಂದೂ ಸಹ ಹೇಳಿದ್ದೀರಿ. ನಾನು ತಮ್ಮನ್ನು ಕೇಳುವುದೇನೆಂದರೆ ಸ್ಕೀಮ್ ಆಫ್ ಥಿಂಗ್ಸ್ ಏನು ಇದೆ ? ರೂಲ್ಸ್ ಆಫ್ ಪ್ರೊಸಿಜರ್‌ನಲ್ಲಿ ಏನು ಇದೆ ? ಯಾವ ರೀತಿ ಇದರ ಬಗ್ಗೆ ತೀರ್ಮಾನ ಮಾಡಬೇಕಂ, ಆ ರೀತಿ ಇದು ಉದ್ಭವ ಆಗುವ ಆಗಿಲ್ಲ. ಸಿಯುಮ ೫೯ ರಲ್ಲಿ ನೋಟೀಸ್ ಕೊಡಬೇಕು ಎಂದು ಇದೆ, ಎರಡನೆಯದು ಯಾರು ಯಾರಿಗೆ ನೋಟೀಸ್ ಕೊಡಬೇಕು ಎಂದು ಇದೆ, ಮೂರನೆಯದು ಯಾವ ಯಾವ ವಿಷಯಗಳಿಗೆ ಕೊಡಬೇಕು ಎಂದು ಇದೆ. ನಾಲ್ಕನೆಯದು ಕೋರ್ಟ್ ಆಥವಾ ಟ್ರಿಬ್ಯೂನಲ್‌ಗಳ ಮುಂದೆ ಇರುವ ವಿಷಯದ ಬಗ್ಗೆ ನೋಟೀಸ್ ಕೊಡುವ ಆಗಿಲ್ಲ. ಐದನೆಯದು, ರೂಲ್ ೬೩ ರಲ್ಲಿ ಮಾತ್ರ ಯಾವ ರೀತಿ ನಿರ್ಧಾರ ಮಾಡ ಬೇಕೆಂದು ಇದೆ. ಯಾವ ರೀತಿ ನಿರ್ಧಾರ ಮಾಡಬೇಕು ಎಂದು ಇರುವಾಗ ನೀವು ಕನ್‌ಸೆಂಟ್ ಕೊಡ ಬೇಕಾಗಿಲ್ಲ. ವಿತ್‌ಹೋಲ್ಡ್ ಮಾಡಬಹುದು ಎಂದು ಇದೆ. ವಿತ್‌ಹೋಲ್ಡ್‌ಗೆ ಎಲ್ಲಾ ಮಾಹಿತಿ ಇದೆ ಎನ್ನುವ ವಿಷಯವನ್ನು ತಿಳಿದುಕೊಂಡಿದ್ದೀರಿ. ಅದು ಬಹಳ ಮುಖ್ಯವಾದುದು. ಎರಡನೆಯದು, ಇದರಲ್ಲಿ ಕನ್‌ಸೆಂಟ್ ರೆಫ್ಯೂಸ್ ಮಾಡಿದ್ದರೆ.

> " Provided that where the Speaker has refused his consent under rule 59 or is of opinion that the matter proposed to be discussed is not in order, he may, if he thinks in necessary read the notice of motion and state the reasons for refusing consent or holding the motion as not being in order "

ಇದರಲ್ಲಿ ಏನಾಗಿದೆ ಎಂದರೆ ರೆಫ್ಯೂಸ್ ಮಾಡಿದರೂ ಸಹಾ ಆದನ್ನು ಕ್ಷಿಸದನದ ಗಮನಕ್ಕೆ ತಂದು ಏತಕ್ಕಾಗಿ ರೆಫ್ಯೂಸ್ ಮಾಡಿದ್ದೀರಿ ಎಂದು ಹೇಳಬೇಕಾಗುತ್ತದೆ. ನಾವು ಕೊಟ್ಟಂಥ ನಿಲುವಳಿ ಸೂಚನೆಯನ್ನು ಏತಕ್ಕಾಗಿ ರೆಫ್ಯೂಸ್ ಮಾಡಿದ್ದೀರಿ ಎಂದು ತಾವು ಏನು ಹೇಳಲಿಲ್ಲ. ಸುಮ್ಮನೆ ರೆಫ್ಯೂಸ್ ಮಾಡಿದ್ದೇನೆಂದು ಹೇಳುತ್ತೀರಿ. ನಾವು ಇವತ್ತಿನ ದಿವಸ ಯಾವ ಪ್ರಶ್ನೆ ಎತ್ತಿದರೂ ಸಹಾ I am directed to state that the Hon'ble Speaker has with hold his consent. ಎಂದು ಹೇಳುತ್ತೀರಿ ಮಂತ್ರಿ ಅದು It is by a third party. They have said it on behalf of the Speaker stating " I am directed to State " Now, my position is I am sure you would have applied your mind on this but at the same time the reasons must have been told for refusal. ಇನ್ನೂ ಒಂದು ಪ್ರಾವಿಷನ್ ಇದೆ. ಅದು ಏನೆಂದರೆ ಯಾವಾಗ ಮಾಹಿತಿಯನ್ನು ಕೊಟ್ಟಿಲ್ಲವೆಂದು ಗೊತ್ತಾದ ಮೇಲೆ ಯಾವ ಮಾಹಿತಿಯು ಬೇಕಾಗಿದೆಯೆಂದು ಕೇಳಿ ಆಮೇಲೆ ತೀರ್ಮಾನಕ್ಕೆ ಬರತಕ್ಕಂಥ ಜವಾಬ್ದಾರಿ ಇದೆ ಎಂದು ತಿಳಿದುಕೊಂಡಿದ್ದೇನೆ. ಹಾಗೆ ಮಾಡದೇ ಹೋದರೆ ಪಾರ್ಲಿಮೆಂಟರಿ ಪ್ರೊಸೀಜರ್‌ಗೆ ಅಪಚಾರವಾಗುತ್ತದೆ. ಯಾವುದೇ ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟರೂ ಸಹಾ ತಕ್ಷಣವೇ ಆದನ್ನ ಕಾಲಿಂಗ್ ಅಟೆನ್‌ಷನ್‌ಗೆ ಪರಿವರ್ತಿಸಲಾಗಿದೆ ಎಂದು ಬರೆದುಬಿಟ್ಟರೆ ಏನು ಪ್ರಯೋಜನವಾಗುತ್ತದೆ ? ನಾವು ಪ್ರಶ್ನೆಯನ್ನು ಇಲ್ಲಿ ಎತ್ತಿದ್ದುದು ಏತಕ್ಕೆ ? ನಾವು ಇದ್ದು ಏನು ಪ್ರಯೋಜನ ? ಏನೂ ಪ್ರಯೋಜನವಾಗುವುದಿಲ್ಲ. ಗಹನವಾದ ವಿಷಯಗಳನ್ನು ಅಡ್ಜರ್ನ್‌ಮೆಂಟ್ ಮೋಷನ್ ರೂಪದಲ್ಲಿ ತಂದಾಗ ಆ ಬಗ್ಗೆ ಏನು ತೀರ್ಮಾನ ಮಾಡಬೇಕು, ಏತಕ್ಕಾಗಿ ಕೊಟ್ಟಿದ್ದಾರೆ ಎನ್ನುವುದನ್ನು ತಾವೇ ವಿಚಾರ ಮಾಡಿ. ಐದು ನಿಮಿಷ ನಮ್ಮನ್ನು ಕೇಳಿ ಆ ನಂತರ ಒಂದು ನಿರ್ಧಾರಕ್ಕೆ ಬನ್ನಿ. ತಮ್ಮ ನಿರ್ಧಾರಕ್ಕೆ ನಾವು ಬದ್ಧರಾಗುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ನಾನು ರಾಮನಗರದಲ್ಲಿ ನಡೆದಂಥ ಘಟನೆಯ ಬಗ್ಗೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ. ನಿಲುವಳಿ ಸೂಚನೆಗೆ ಕನ್‌ಸೆಂಟ್ ವಿತ್ ಹೋಲ್ಡ್ ಮಾಡಿದ್ದೀರಿ. ಅದನ್ನು ಕಾಲಿಂ ' ಅಟೆನ್‌ಷನ್‌ಗೆ ಕನ್‌ವರ್ಟ್ ಮಾಡಿದ್ದೀರಿ. ಪಬ್ಲಿಕ್ ಇಂಪಾರ್ಟೆನ್ಸ್ ಬಗ್ಗೆ ಏನು ಎನ್ನುವುದನ್ನೆ ನಿಯಮ ೫೯ ಮತ್ತು ೬೨ರಲ್ಲಿ ನೋಡಿದರೆ ಸ್ಪಷ್ಟವಾಗಿ

ಗೊತ್ತಾಗುತ್ತದೆ. even according to the Parliamentary Procedure by Sri M. N. Kaul & Shakdar. ಒಂದು ಪ್ರಿನ್ಸಿಪಲ್‌ನ್ನು ಒಪ್ಪಿಕೊಂಡರೂ ಕಾಲಿಂಗ್ ಅಟೆನ್‌ಷನ್‌ಗೆ ತಾವು ಕನ್‌ವರ್ಟ್ ಮಾಡುವುದಕ್ಕಾಗುವುದಿಲ್ಲ. ಪೋಸ್ಟ್‌ಪೋನ್ ಮಾಡಬಹುದೇ ಹೊರತು ಅದನ್ನು ತಾವು ಕಾಲಿಂಗ್ ಅಟೆನ್‌ಷನ್‌ಗೆ ಕನ್‌ವರ್ಟ್ ಮಾಡುವುದಕ್ಕಾಗುವುದಿಲ್ಲ. At Page 423 of the Practice and Procedure of Parliament says :

> 'The Speaker may, in a fit case, postpone consideration of a notice of an adjournment motion without prejudice to the claim of the member to raise an urgent matter. Circumstances in which consideration of adjournment motions has been postponed are:
>
> until certain information had been obtained, or until full facts were available;

ಕಾಲಿಂಗ್ ಅಟೆನ್‌ಷನ್‌ಗೆ ಯಾವುದಾದರೂ ಪರ್ಟಿಕ್ಯುಲರ್ ವಿಷಯಗಳು ಇದ್ದರೆ, ಪಬ್ಲಿಕ್ ಇಂಪಾರ್ಟೆನ್ಸ್ ಇರುವುದು ಮಾತ್ರ ಕಾಲಿಂಗ್ ಅಟೆನ್‌ಷನ್‌ಗೆ ಬರುತ್ತದೆ. ಇದರಲ್ಲಿ ನಮ್ಮ ಕಾಂಗ್ರೆಸ್ ಪಕ್ಷ ದವರೂ ರೈಸ್ ಮಾಡಿದ್ದಾರೆ. ನಾನೂ ಸಹ ನಿಲುವಳಿ ಸೂಚನೆಯನ್ನು ರೈಸ್ ಮಾಡಿದ್ದೇನೆ. ಎಲ್ಲದರಲ್ಲೂ ಕೂಡ such matters of public importance, which attracts only rule 59 and not 72. The very purpose of giving calling attention motion is to consider matters arising out of public importance. To-day we have before is an adjournment motion which has great public importance. ನಾವು ತಮಗೆ ಥ್ಯಾಂಕ್ಸ್ ಕೊಡಬೇಕು. ಇದನ್ನು ರೀ-ಕನ್‌ಸಿಡರ್ ಮಾಡಬಹುದು, ಯೋಚನೆ ಮಾಡುತ್ತೇವೆ ಎಂದು ಒಪ್ಪಿಕೊಂಡಿದ್ದೀರಿ. ತಮ್ಮ ಛೇಂಬರ್‌ಗೆ ಬನ್ನಿ ಎಂದು ಹೇಳಿದ್ದೀರಿ. ತಾವು ಪ್ರಿನ್ಸಿಪಲ್‌ನ್ನು ಒಪ್ಪಿಕೊಂಡಿದ್ದೀರಿ. ಒಪ್ಪಿಕೊಂಡಿರುವುದನ್ನು ಸದನದಲ್ಲಿ ಹೇಳಿದರೂ ಒಂದೇ, ತಮ್ಮ ಛೇಂಬರ್‌ನಲ್ಲಿ ಹೇಳಿದರೂ ಒಂದೇ. ರಾಜ್ಯದಲ್ಲಿ ಈಗ ಮೂರು ಕಡೆ ಫೈರಿಂಗ್ ಆಗಿದೆ. ರಾಮನಗರದಲ್ಲಿ ನಡೆದಂಥ ಘಟನೆಯ ಬಗ್ಗೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ. ಅವರು ಕೊಟ್ಟಿದ್ದಾರೆ. ಇದು ಬಹಳ ಪಬ್ಲಿಕ್ ಇಂಪಾರ್ಟೆನ್ಸ್ ಇರುವುದು. This is a very exceptional case. In Chapter XXI says :

> 'Normally no business not included in the List of Business for the day can be transacted at any sitting without the permission of the Speaker. However, a matter of urgent public importance can be raised by interrupting the regular business of the House through an adjournment motion tabled at the earliest opportunity, if the Speaker gives his consent.'

ಅದಕ್ಕೋಸ್ಕರವಾಗಿ ನಾನು ಕೇಳುವುದು. ತಾವು ದಯವಿಟ್ಟು ಇದನ್ನು ರಿವೈಸ್ ಮಾಡಬೇಕು. ನಿಯಮ ೫೯ ಮತ್ತು ೭೨ರಲ್ಲಿ ಓದಿದರೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ನಿಯಮ ೫೯ರಲ್ಲಿ ಈ ರೀತಿ ಇದೆ.

> ''ಈ ನಿಯಮಗಳ ಉಪಬಂಧಗಳಿಗೊಳಪಟ್ಟು, ಸಾರ್ವಜನಿಕವಾಗಿ ಅತ್ಯಂತ ಮಹತ್ವ ವುಳ್ಳ ಒಂದು ನಿರ್ದಿಷ್ಟ ವಿಷಯದ ಮೇಲೆ ಚರ್ಚೆ ನಡೆಸುವ ಉದ್ದೇಶಕ್ಕಾಗಿ ಸದನದ ಕಾರ್ಯಕಲಾಪಗಳ ನಿಲುವಳಿ ಬಗ್ಗೆ ಸೂಚನೆಯನ್ನು ತರಬಹುದು.''

ಇದು ಒಂದು. ಕಾಲಿಂಗ್ ಅಟೆನ್‌ಷನ್‌ನಲ್ಲಿ ಗಮನ ಸೆಳೆಯುವ ಕಾರ್ಯ ವಿಧಾನ ಎಂದು ಈ ರೀತಿ ಇದೆ.

"ಯಾರಾದರೂ ಒಬ್ಬ ಸದಸ್ಯರು ಪೂರ್ವಭಾವಿಯಾಗಿ ಅಧ್ಯಕ್ಷರ ಅನುಮತಿಯನ್ನು ತೆಗೆದು ಕೊಂಡು ಸಾರ್ವಜನಿಕ ಮಹತ್ವದ ಯಾವುದಾದರೂ ಜರೂರು ವಿಚಾರವನ್ನು ಮಂತ್ರಿಯವರ ಗಮನಕ್ಕೆ ತರಬಹುದು"..... ಈಗಾಗಲೇ ಇದು ಜರೂರು ವಿಷಯ ಆಗಿಹೋಗಿದೆ. ಆಳಂದದಲ್ಲಿ, ರಾಮನಗರದಲ್ಲಿ ಮತ್ತು ಬೆಳಗಾಂನಲ್ಲಿ ಮೂರು ಇವೆಂಟ್ಸ್‌ಗಳು ಆಗಿದೆ. I can call the attention of the concerned Minister about the public importance of such incident. Whereas in adjournment motion we can censure the Government... ತಾವು ದಯವಿಟ್ಟು ಇದನ್ನು ಅಡ್ಜರ್ನ್‌ಮೆಂಟ್ ಮೋಷನ್ ಆಗಿ ಟ್ರೀಟ್ ಮಾಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಪತಿಗಳೇ, ಈಗ ಮಾನ್ಯ ಸದಸ್ಯರು ಈ ರಾಜ್ಯದಲ್ಲಿ ನಡೆದಂಥ ಗೋಲಿಬಾರ್ ವಿಚಾರವಾಗಿ ಚರ್ಚೆ ಮಾಡತಕ್ಕಂಥದ್ದರ ಬಗ್ಗೆ ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿದ್ದಾರೆ. ಆ ಬಗ್ಗೆ ತಾವು ತಮ್ಮ ಛೇಂಬರ್‌ನಲ್ಲಿ ವಿಚಾರಣೆ ಮಾಡಿ ಕಾಲಿಂಗ್ ಅಟೆನ್‌ಷನ್‌ಗೆ ಕನ್‌ವರ್ಟ್ ಮಾಡಿದ್ದೀರಿ. ಈಗ ಮಾನ್ಯ ಸದಸ್ಯರು ಇದು ಅತ್ಯಂತ ಮಹತ್ವದ ಸಾರ್ವಜನಿಕ ವಿಚಾರ, ಈ ವಿಚಾರ ಚರ್ಚೆಯಾಗಬೇಕು, ಈ ಮನೆಯಲ್ಲಿ ಇದಕ್ಕೆ ಅವಕಾಶ ಇರಬೇಕೆಂದು ವಿಚಾರವನ್ನು ಎತ್ತಿದ್ದಾರೆ. ಕಾನೂನು ಸಚಿವರು ಒಂದು ವಿಧಿಬಿಂದುವನ್ನು ಎತ್ತಿದ್ದಾರೆ. ಚರ್ಚೆ ನಡೆಯುತ್ತಿದೆ. ಇದರಲ್ಲಿ ಇದೆಲ್ಲಕ್ಕೂ ಒಂದು ಉತ್ತರ ಇದೆ. ಕೌಲ್ ಅಂಡ್ ಶಕ್ಧರ್‌ನಲ್ಲಿ ಓದಿದರೆ ನಮಗೆ ಸ್ಪಷ್ಟವಾಗಿ ಯಾವ ರೀತಿ ಹೋಗಬಹುದು ಎಂಬುದರ ಬಗ್ಗೆ ಸೂಚನೆ ಇದೆ.

'When the Speaker withholds his consent to the moving of an adjournment motion in his Chamber, it is neither obligatory to read out the motion to the House nor to give reasons for refusing the consent. After a member is informed of the Speaker's decision withholding his consent, no question is permitted to be raised in the House either on the subject-matter of the notice or the reasons for disallowance thereof.'

ಇದು ತಮ್ಮ ಅಧಿಕಾರ. ನೀವು ಕಾರಣ ಕೊಡಬೇಕಾಗಿಲ್ಲ. ಕಾರಣ ಕೊಡಬೇಕಾಗಿಲ್ಲ ಎಂದರೆ ಈ ನಿರ್ಣಯವನ್ನು ಕೊಡುವುದಕ್ಕಿಂತ ಮೊದಲು ಸಂಪೂರ್ಣವಾಗಿ, ಆಳವಾಗಿ, ಆಲೋಚನೆ ಮಾಡಿ ನಿರ್ಣಯವನ್ನು ಕೊಡಬೇಕಾಗುತ್ತದೆ. Further it says :

'If, however, a member would like to make a submission to the Speaker to reconsider his decision, he can do so either in person to the Speaker in his Chamber later during the day or by submitting a written representation to the Speaker in that behalf.'

ನೀವು ನಿರ್ಣಯ ಕೊಟ್ಟ ಕೂಡಲೇ ಅದು ಕೊನೆಯಲ್ಲ. ಪುನಃ ಸದಸ್ಯರಿಗೆ ಅಧಿಕಾರ ಇದೆ ನಿಮ್ಮ ಮನಸ್ಸು ಒಲಿಸುವುದಕ್ಕೆ. ಆ ಬಗ್ಗೆ ಛೇಂಬರ್‌ನಲ್ಲಿ ತಮಗೆ ಹೇಳುವುದಕ್ಕೆ ಅವಕಾಶ ಇದೆ. ಮಾನ್ಯ ಬಂಗಾರಪ್ಪನವರು ಛೇಂಬರ್‌ಗೆ ಏತಕ್ಕೆ ಹೋಗಬೇಕು ಎಂಬ ವಾದ ಮಾಡಿದರು. ನಾನು ಅರ್ಥ ಮಾಡಿಕೊಳ್ಳುತ್ತೇನೆ, ಈ ಮನೆಯಲ್ಲಿ ಚರ್ಚೆ ಆಗಬೇಕು ಎಂಬ ಭಾವನೆಯಿಂದ ಹೇಳಿದ್ದಾರೆ. ಛೇಂಬರ್‌ಗೆ ಹೋಗುವುದು ತಪ್ಪಲ್ಲ. ಲೋಕಸಭೆಯಲ್ಲಾಗಲೀ ಇಲ್ಲಾಗಲೀ ಸ್ಪೀಕರ್ ಛೇಂಬರ್‌ಗೆ ಹೋಗುವುದು ಅಗೌರವವಲ್ಲ. ಈ ಮನೆಯಲ್ಲಿ ಚರ್ಚೆ ಆಗಬೇಕಾಗಿಲ್ಲ. ಛೇಂಬರ್‌ನಲ್ಲಿ ಹೋಗಿ ಚರ್ಚೆ ಆದಮೇಲೆ ನಿಮ್ಮ ವಾದವನ್ನು ಇವರು ಒಪ್ಪಬಹುದು ಅಥವಾ ಅವರಾದರೂ ಒಪ್ಪಬಹುದು. ಮುಂದೆ ಹೀಗಿದೆ.

"In case the Speaker is satisfied on the submission of the Member when there are adequate grounds to bring up the

matter before the House, he would either mentioned it or permit the Member to raise it on the following day irrespective of the fact that the notice has been given on the previous day.''

ಈ ಮನೆಯ ಕಾರ್ಯಕಲಾಪಗಳು ನಿಯಮಗಳನುಗುಣವಾಗಿ ನಡೆಯಬೇಕೆಂಬ ಬಗ್ಗೆ ಎಲ್ಲರ ಅಭಿಪ್ರಾಯ ಇದೆ. ಹೀಗಿರುವಾಗ ತಮ್ಮ ನಿರ್ಣಯವನ್ನು ಬದಲಿಸತಕ್ಕ ಹಕ್ಕು ತಮಗಿದೆ, ನಿಮ್ಮ ಮನಪೊಲಿಸತಕ್ಕ ಹಕ್ಕಿದೆ. ಆದನ್ನು ಛೇಂಬರ್‌ನಲ್ಲಿ ಮಾಡಬಹುದು. ಆದಂ ಕೂಡಲೇ ಆಗಬೇಕು ಎನ್ನುವ ವಾದ ಸರಿಯಲ್ಲ ಇವೊತ್ತಿನ ದಿವಸ ಕಾರ್ಯಕಲಾಪಗಳನ್ನೆಲ್ಲಾ ಮುಂದುವರಿಸಿಕೊಂಡು ಹೋಗೋಣ. ತಮ್ಮ ಛೇಂಬರ್‌ನಲ್ಲಿ ಬಂದು ಮನವರಿಕೆ ಮಾಡಿದರೆ ನಾಳೆ ಈ ವಿಚಾರ ತೆಗೆದುಕೊಳ್ಳೋಣ. ಏತಕ್ಕೆಂದರೆ ಸಭೆಯ ಕಾರ್ಯಕಲಾಪ ನಡೆಯಬೇಕು. ಈ ಮನೆಯ ಸಮಯಂ ಸದುಪಯೋಗ ಆಗಬೇಕು. ಇದೇ ಕೊನೆಯಲ್ಲ ಬೇರೆ ಬೇರೆ ಪಕ್ಷದ ಮಾನ್ಯ ನಾಯಕರುಗಳು ಕೊಟ್ಟಿರುವ ಅಡ್ಜರ್ನ್‌ಮೆಂಟ್ ಮೋಷನ್ ಬಗ್ಗೆ ಕರೆದು ಚರ್ಚೆ ಮಾಡಿ ವಿಚಾರ ತೆಗೆದುಕೊಂಡು ನಿರ್ಣಯ ಬದಲಂ ಮಾಡುವ ಹಕ್ಕಿದೆ. ಹಾಗೆ ಮಾಡಿ ನಾಳೆ ಆದನ್ನು ತೆಗೆದುಕೊಳ್ಳಬಹುದು.. ಈ ಸಲಹೆಯನ್ನು ಕೊಡುತ್ತಿದ್ದೇನೆ. ದಯವಿಟ್ಟು ಸಹಕರಿಸಬೇಕೆಂದಂ ಕೇಳಿ ಕೊಳ್ಳುತ್ತೇನೆ.

ಅಧ್ಯಕ್ಷರು.—ತಾವು ಆಷ್ಟು ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಕಂದಾಯ ಸಚಿವರು ಈ ಬಗ್ಗೆ ಕೌಲ್ ಮತ್ತು ಶಕ್ಧರ್‌ನಿಂದ ಕೋಟ್ ಮಾಡಿ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಈ ಸದನದಲ್ಲಿ ಕೆಲವು ಪದ್ಧತಿ ಆಥವಾ ಪರಂಪರೆಗಳನ್ನು ನಡೆಸಿಕೊಂಡು ಬಂದಿದ್ದೇವೆ. ಮಾಜಿ ಸಭಾಪತಿಗಳೂ ಕೂಡ ಇಲ್ಲಿದ್ದಾರೆ. ಕೌಲ್ ಆಂಡ್ ಶಕ್ಧರ್ ಪೇಜ್ ಳಿಸಿರ ಪ್ರಕಾರ ಯಾವ ಒಂದು ಸಿಯಮ, ಯಾವ ಒಂದು ಪದ್ಧತಿಯನ್ನು ಅನುಸರಿಸಬೇಕು ಎಂದು ಕಾಣಿಸಿದ್ದಾರೆ. ಅದನ್ನು ಉದ್ಧರಿಸಿ ಕಂದಾಯ ಸಚಿವರು ಹೇಳಿದ್ದಾರೆ. ಆದರೆ ತಾವು ದಯಮಾಡಿ ರೆಕಾರ್ಡ್ ತೆಗೆಸಿ ನೋಡಬೇಕು. ನಾನು ಕೂಡ ೧೯೭೨ನೇ ಇಸವಿಯಿಂದ ಇಲ್ಲಿ ಸದಸ್ಯನಾಗಿದ್ದೆ. ನನಗೆ ಗೊತ್ತಿದ್ದ ಪ್ರಕಾರ ಅಡ್ಜರ್ನ್‌ಮೆಂಟ್ ಮೋಷನ್ ಇಲ್ಲಿ ಬಂದಾಗ ಅದನ್ನು ರಿಜೆಕ್ಟ್ ಮಾಡುತ್ತೀರಿ, ಸ್ವಲ್ಪ ಗೊಂದಲ ಆಗುತ್ತದೆ, ನಂತರ ಅಲ್ಲಿ ಹೊರಟುಹೋಗುತ್ತಿತ್ತು. ಅಥವಾ ಅದಿಲ್ಲದಿದ್ದರೆ ತಾವು... ಏಕೆಂದರೆ ಒಂದು ರೀತಿ courtesies which have been accepted by conventions... accepted particularly in Karnataka Legislative Assembly these courtesies are, allowing many members, of the responsible Opposition parties to make preliminary submission. ಹಿಂದೆ ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಾಗ ಈ ರೀತಿ ಆಗಿದೆ. ದಯಮಾಡಿ ತಾವು ರೆಕಾರ್ಡ್ಸ್ ತರಿಸಿ ನೋಡಿ. ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಕೊಟ್ಟಿದ್ದು ಯಾವಾಗಲೂ ಇದೆ, ನಿರಾಕರಣೆ ಮಾಡಿದ್ದಾದು ನನಗಂತೂ ನೆನಪಿಲ್ಲ. ಆದರಲ್ಲೂ ಕೂಡ ತಮ್ಮ ಛೇಂಬರ್‌ಗೆ ಕರೆಯಿಸಿರಿ. ದಯಮಾಡಿ ತಾವು ನೆನಪು ಮಾಡಬೇಕು. ಕರ್ನಾಟಕ ವಿಧಾನಸಭೆಯಲ್ಲಿ ಕೆಲವು ಪದ್ಧತಿಗಳಂ ನಡೆದುಕೊಂಡು ಹೋಗಿವೆ. ತಪ್ಪೋ, ನೆಪ್ಪೋ ಸರಿಯೋ ಸರಿಯಿಲ್ಲವೋ. ಕರ್ನಾಟಕದ ಈ ಪರಂಪರೆಯೇ ಉಜ್ವಲ ಪರಂಪರೆ ಎಂದು ತಾವು ನಾವು ಹೇಳಿಕೊಂಡು ಹೋಗುತ್ತಿದ್ದೇವೆ. ಯಾವಾಗಲೂ ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಾಗ ಛೇಂಬರ್‌ಗೆ ಹೋಗಿ ಅಲ್ಲಿ ಕನ್‌ಸಿಡರ್ ಮಾಡಿ, ಈ ಆದನಕ್ಕೆ ಅದು ಪುಣಃ ಬಂದ ಪ್ರಕರಣ ನನ್ನ ನೆನಪಿನಲ್ಲಿ ಇಲ್ಲ. ಯಾರಾದರೂ ಹೇಳಬೇಕು. ಇದು ಹೊಸದು. ಕೌಲ್ ಆಂಡ್ ಶಕ್ಧರ್ ಚಾಪ್ಟರ್ ಇವತ್ತಿನ ದಿವಸ ನೆನಪು ಮಾಡಿಕೊಂಡು ಆದನ್ನು ಉದ್ಧರಿಸಿ ಸಭೆ ನಡೆಸುವುದಾದರೆ I have no objection. ನಾವೆಲ್ಲಾ ಒಳ್ಳೆಯ ಪರಂಪರೆ ಕಟ್ಟಿಕೊಂಡು ಹೋಗಬೇಕೆಂದು ಇದ್ದವರು, ಸಂವಿಧಾನದ ಒಪ್ಪಿಗೆಯನ್ನು ಪಡೆದಂಥ ಸೌಜನ್ಯತೆ ಯಾವುದಿದೆ ಅದನ್ನು ಬದಿಗಿರಿಸಿ We declare holiday for those courtesies which have been so far enjoyed by this House and pick up some portion or one paragraph from Kaul and Shakdar and all these course of action, I am just bringing to your kind notice and ultimately I leave it to you and I will bow down to your decision. ಹೋಸ್ಟ್ ಅನ್ನು ಬಹಳ ಇಂಟ್ರೊಡ್ಯೂಸ್ ಮಾಡುತ್ತಾ ಬಂದಿದ್ದೇವೆ.

ಇದರಲ್ಲೂ ಕೂಡ ಇಂಟ್ರೊಡ್ಯೂಸ್ ಮಾಡುವುದಕ್ಕೆ ಹೋದರೆ We will be violating certain courtesies which have been accepted by conventions, We will be violating the well-laid down conventions and precedents which are on record. ಏತಕ್ಕೆಂದರೆ ಇಷ್ಟರವರೆಗೆ ಇದು ಆಗಿಹೋಗಿರುತ್ತೆ. ರೆಸ್ಪಾನ್ಸಿಬಲ್ ಅಪೊಸಿಷನ್ ಪಾರ್ಟಿಯವರು ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಾಗ ಅದರ ಗಾಂಭೀರ್ಯ ಏನು ? ಅದನ್ನು it is a Ministerial responsibility ಎಂದು ಹೇಳುತ್ತಾ ಇದ್ದೇವೆ. It is not a mere law and order question, one Police Officer or two Police Officers shooting down or doing this or that. No. It is not like that. It is a minority problem which is largely concerned in the issue for which the Ministry has failed to discharge. That is a failure of the Government. There is a crisis in the ministerial responsibility. ಅದು ಕಾಲಿಂಗ್ ಅಟೆನ್‌ಷನ್ ಆಗಿ ಹೇಗೆ ಬರುತ್ತದೆ ಅಧ್ಯಕ್ಷರೆ ? ಖಂಡಿತವಾಗಿ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ದಯಮಾಡಿ ವಿರೋಧಪಕ್ಷದಲ್ಲಿ ಸಾಕಷ್ಟು ವರ್ಷ ಕೆಲಸ ಮಾಡಿದಂಥ ಕಂದಾಯ ಸಚಿವರು ಕೌಲ್ ಅಂಡ್ ಶಕ್ದರ್ ಪುಟಗಳನ್ನು ಸಂಶೋಧನೆ ಮಾಡತಕ್ಕ ಕೆಲಸಕ್ಕೆ ದಯಮಾಡಿ ಹೋಗಬೇಡಿ. ಏನು ಉತ್ತಮವಾದ ಕೆಲವು ಪರಂಪರೆ ನಡೆದುಕೊಂಡು ಬಂದಿದೆ ಅದಕ್ಕೆ ತಲೆಬಾಗತಕ್ಕ ಸೌಜನ್ಯತೆಯನ್ನು ದಯಮಾಡಿ ತೋರಿಸಬೇಕು. ಕೆಲವು ಸಾರಿ ನಮಗೆ ಏನನ್ನಿಸುತ್ತದೆ ? ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲೂ ರೂಲಿಂಗ್ ಬದಲಾವಣೆ ಆಗುತ್ತಾ ಇರುತ್ತದೆ. ಅದು ಒಳ್ಳೆಯದು. ಇಲ್ಲಿ ಕುಳಿತವರ ಕಷ್ಟ ಅಲ್ಲಿ ಗೊತ್ತಾಗಬೇಕು. ಅಲ್ಲಿ ಕುಳಿತವರ ಕಷ್ಟ ಇಲ್ಲಿ ಗೊತ್ತಾಗಬೇಕು. ಅಲ್ಲಿ ಹೋದ ಕೂಡಲೆ ಇಲ್ಲಿ ಕುಳಿತವರ ಕಷ್ಟ, ಸೌಜನ್ಯತೆ ಇದನ್ನೆಲ್ಲಾ ಗಾಳಿಗೆ ತೂರತಕ್ಕ ಕೆಲಸವನ್ನು ಬೊಮ್ಮಾಯಿಯವರಂತೂ ಮಾಡಬಾರದು. ಕೆಲವು ಸಾರಿ ಇಂತಹ ವಿಷಯಗಳನ್ನು ಒಪ್ಪಿದ್ದೀರಿ. I know the responsibility of the Opposition, ಆದ್ದರಿಂದ ಇದನ್ನು ಒಪ್ಪತಕ್ಕದ್ದು ಎಂದು ಹೇಳತಕ್ಕದ್ದು ಮಾಡಿದರೆ ನಿಮಗೆ ಒಳ್ಳೆಯ ಹೆಸರು ಬರುತ್ತದೆ. ಒಳ್ಳೆಯ ಸಂಪ್ರದಾಯವನ್ನು ಎತ್ತಿಕಟ್ಟತಕ್ಕ ಮನಸ್ಸನ್ನು ದಯಮಾಡಿ ಮಾಡಬೇಕಾಗುತ್ತದೆ. ಸರ್ಕಾರ ಕೂಡ ಈ ವಿಚಾರದಲ್ಲಿ ಸಭಾಪತಿಗಳನ್ನು ಎಂಬರಾಸ್‌ಮೆಂಟ್ ಮಾಡತಕ್ಕ ಕೆಲಸ ಮಾಡಬಾರದು. we don't want to do that ನೀವು ಆ ಪರಿಸ್ಥಿತಿಗೆ ಕೊಂಡೊಯ್ಯುತ್ತಿದ್ದೀರಿ. ಅದಕ್ಕೆ ಹೋಗದೆ ಸೌಜನ್ಯತೆ, ಸಂವಿಧಾನದ ಚೌಕಟ್ಟಿನಲ್ಲಿ ಕೆಲಸ ಮಾಡತಕ್ಕ ಉತ್ತಮ ಪರಂಪರೆಯನ್ನು ಎತ್ತಿಹಿಡಿಯುತಕ್ಕ ಕೆಲಸ ಮಾಡಬೇಕೆಂದು ನನ್ನ ಸವಿನಯ ವಿನಂತಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಉದ್ಧರಿಸಿದ್ದ ಲೋಕಸಭೆಯಲ್ಲಿ ಬೇರೆ ಬೇರೆ ವಿಧಾನ ಸಭೆಯಲ್ಲಿ ಮಂತ್ರಿ ನಮ್ಮ ವಿಧಾನಸಭೆಯಲ್ಲಿ ನಡೆದುಕೊಂಡು ಬಂದದ್ದನ್ನು ಮಾನ್ಯ ಮೊಯಿಲಿಯವರು ಸೌಜನ್ಯ ಮತ್ತು ಸಂವಿಧಾನದ ವಿಚಾರ ಹೇಳುತ್ತಿದ್ದಾರೆ. ಬಹಳ ಒಳ್ಳೆಯದೂ. ನಾವೂ ಕೂಡ ಅದನ್ನು ವಿಚಾರಬಾರದು ಎಂಬುದನ್ನು ಒಪ್ಪುತ್ತೇನೆ ತಾಳ್ಮೆಯಿಂದ ಸ್ವಲ್ಪ ಕೇಳಿ. ಇಂಥ ನಿರ್ಣಯವನ್ನು ಹಿಂದೆ ಸಭಾಪತಿಗಳು ಕೊಟ್ಟಾಗ ಯಾವರೀತಿ ನಡೆದುಕೊಳ್ಳಬೇಕು ಎಂದಿದೆ. ಸಭಾಪತಿಗಳು ಕೊಡದಿದ್ದರೆ ತಾವು ಅರ್ಥ ಮಾಡಿಕೊಳ್ಳಬೇಕು ಇಂಥದೂ ಆಗಿಲ್ಲ ಹಿಂದೆ. ಇದು ಹೊಸದು ಸಭಾಪತಿಗಳು ಛೇಂಬರ್‌ನಲ್ಲಿ ಅಡ್ಜರ್ನ್‌ಮೆಂಟ್ ಮೋಷನ್ ತಿರಸ್ಕರಿಸಿ ತಿಳಿಸಿದಂಥ ವಿಚಾರ ಈ ಸಭೆಯಲ್ಲಿ ಚರ್ಚೆಯಾಗಿಲ್ಲ. ಇಂದು ಅಂಥ ಒಂದು ನಿರ್ಣಯವನ್ನು ಅಧ್ಯಕ್ಷರು ಕೊಟ್ಟಿದ್ದಾರೆ. ಕೊಟ್ಟಮೇಲೆ ಯಾವರೀತಿ ನಡೆಯಬೇಕು ? ಸಭಾಪತಿಗಳನ್ನು ಯಾರು ಇಕ್ಕಟ್ಟಿಗೆ ಹಾಕುತ್ತಿದ್ದಾರೆ ? ಸಂವಿಧಾನವನ್ನು ಯಾರು ಮೀರುತ್ತಿದ್ದಾರೆ? ಸೌಜನ್ಯವನ್ನು ಯಾರು ಬಿಟ್ಟುಕೊಡುತ್ತಿದ್ದಾರೆ ಅರ್ಥ ಮಾಡಿಕೊಳ್ಳಿ. ಅಧ್ಯಕ್ಷರು ನಿರ್ಣಯ ಕೊಟ್ಟ ಮೇಲೆ ಅದಕ್ಕೆ ಗೌರವ ಕೊಡಬೇಕು. ನಿರ್ಣಯವನ್ನು ಬದಲಿಸತಕ್ಕ ಅಧಿಕಾರ ಅವರಿಗೆ ಇದೆ. ನಿಮ್ಮ ಹಕ್ಕನ್ನು ಮೊಟಕುಗೊಳಿಸುವುದಾಗಲೀ ನಡೆದುಬಂದ ಪರಂಪರೆಯನ್ನು ಗಾಳಿಗೆ ತೂರತಕ್ಕ ಪ್ರಯತ್ನವನ್ನಾಗಲೀ ನಾವು ಮಾಡಲಿಲ್ಲ. ನಾನು ಸರ್ಕಾರದ ಪರವಾಗಿ ಹೇಳುವುದಿಷ್ಟೆ ಸಭಾಪತಿಗಳು ನಿರ್ಣಯ ಕೊಟ್ಟಮೇಲೆ ಯಾವರೀತಿ ನಾವು ನಡೆದುಕೊಳ್ಳಬೇಕು ? ಇಲ್ಲಿ ನಡೆದಂಥ ಮಾತುಗಳನ್ನು ಕೇಳಿದಾಗ ನನಗೆ ಬಹಳ ಬೇಜಾರಾಗುತ್ತದೆ. ಸಭಾಪತಿಗಳ ಬಗ್ಗೆ ಯಾವುದೇ ಕಡೆಯಿಂದ ವಿಷಯ ಬರಲಿ. ಅವರ ಛೇಂಬರ್‌ಗೆ ನಾವು ಹೋಗತಕ್ಕದ್ದು ಏಕೆ ಎನ್ನುವ ಪ್ರಶ್ನೆ ಕೇಳಿದರು. ಸಭಾಪತಿಯವರಿಗೆ ಅವಮಾನ ವಾಗತಕ್ಕ ರೀತಿಯಲ್ಲಿ ಮಾತನಾಡಿದ್ದೂದು ಸರಿಯೇ ?

3-00 ಪಿ. ಎಂ.

ಶ್ರೀ ಎಂ. ವೀರಪ್ಪ ಮೊಯಿಲಿ.—ಹಾಗೆ ಯಾರೂ ಹೇಳಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈ ಸದನದಲ್ಲಿ ಏನು ಚರ್ಚೆಯಾಗಿದೆ ಎಂಬುದು ಗೊತ್ತಾಗಲಿಲ್ಲವೆಂದು ಹೇಳುತ್ತಿದ್ದೇವೆ.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಬಂಗಾರಪ್ಪನವರೇ ಹೇಳಿದರು.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಅದು ರೆಕಾರ್ಡ್‌ನಲ್ಲಿ ಇದೆ. ಉದ್ವೇಗದಲ್ಲಿ ಆಡಿದ್ದರೂ ಆಡಿರಬಹುದು.

ಶ್ರೀ ಧರ್ಮಸಿಂಗ್.—ಕಸ್ಸೆಂಟ್ ಕೊಡಬೇಕಾದರೆ ವಾದವನ್ನು ಕೇಳಿ ಪ್ರಸ್ತಾವ ಮಾಡಿದರೆ ಹೇಳಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.— ನಾನೂ ಕೇಳಿದ್ದೇನೆ. ಅದು ರೆಕಾರ್ಡ್‌ನಲ್ಲಿ ಇದೆ. ದಯವಿಟ್ಟು ಕೇಳಿ. ಮಾನ್ಯ ಮೊಯ್ಲಿಯವರು ಉಪದೇಶ ಮಾಡಿದರು. ಇದು ಎಲ್ಲರಿಗೂ ಅನ್ವಯವಾಗಬೇಕು. ಆಕಡೆಯವರಿಗೂ, ಈ ಸದನದ ಎಲ್ಲರಿಗೂ ಅದು ಅನ್ವಯವಾಗಬೇಕು. ಸೌಜನ್ಯ ಎಲ್ಲರಿಂದಲೂ ಬರಬೇಕು.

ಶ್ರೀ ಧರ್ಮಸಿಂಗ್.—ನಮ್ಮಲ್ಲಿ ಒಳ್ಳೆಯ ಸಂಬಂಧ ಇದೆ. ಅದನ್ನು ಕೆಡಿಸಲು ಹೋಗಬೇಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇವತ್ತಿನ ಪ್ರಶ್ನೆ ಏನೆಂದರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಬೊಮ್ಮಾಯಿಯವರು ಈ ರೀತಿ ಆಗಬಾರದು. ಫ್ರಂಟ್ ಲೈನ್‌ನಲ್ಲಿ ಈಗ ನೀವೊಬ್ಬರೇ ಇದ್ದೀರಿ, ನೀವೂ ಈ ರೀತಿ ಮಾತನಾಡಿದರೆ ಏನು ಮಾಡುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಹಿಂದೆ ಇಂತಹ ನಿರ್ಣಯಗಳು ಈ ಸಭೆಯಲ್ಲಿ ಬಂದಿರಲಿಲ್ಲ. ಸಭಾಪತಿಯವರು ನಿರ್ಣಯವನ್ನು ಕೊಟ್ಟಮೇಲೆ ಯಾವ ರೀತಿ ಮುಂದುವರಿಯಬೇಕು ಎನ್ನುವ ಪ್ರಶ್ನೆ ಈಗ ಇದೆ. ಅದಕ್ಕೆ ನಾನು ಸಲಹೆ ಕೊಡುತ್ತಿದ್ದೇನೆ. ತಾವು ಅವರನ್ನು ಚೇಂಬರ್‌ನಲ್ಲಿ ಕರೆದು ಕೇಳಿ ರೀಕನ್ಸಿಡರ್ ಮಾಡುವುದಕ್ಕೆ ಅಧಿಕಾರ ಇದೆ. ಇದಕ್ಕೆ ತಮಗೆ ಮನಸ್ಸು ಇರಬೇಕು. ಸಾರ್ವಜನಿಕರ ಮಹತ್ವದ ವಿಚಾರದ ಬಗ್ಗೆ ಸಭಾಪತಿಯವರು ಉದಾರವಾಗಿ ನೋಡಿಕೊಳ್ಳಬೇಕಾಗುತ್ತದೆ. ಈ ಬಗ್ಗೆ ನನ್ನ ಅಭಿಪ್ರಾಯ ಎಲ್ಲಿದ್ದರೂ ಒಂದೇ ಇದೆ. ಈ ವಿಚಾರದಲ್ಲಿ ದಯವಿಟ್ಟು ಸೌಜನ್ಯ ತೋರಿ. ಕಾರ್ಯಕಲಾಪ ಮುಂದಿದ ಮೇಲೆ ಅವರನ್ನು ಚೇಂಬರ್‌ಗೆ ಕರೆದು ಮಾತನಾಡಿ ಇದನ್ನು ನಾಳೆ ದಿವಸ ತೆಗೆದು ಕೊಳ್ಳಬಹುದು. ಈ ಬಗ್ಗೆ ನನ್ನ ಅಭ್ಯಂತರವಿಲ್ಲ. ಆದರೆ ನಿರ್ಣಯ ತಮಗೆ ಬಿಟ್ಟಿದ್ದುದು.

ಶ್ರೀ ಕೆ. ಎಚ್. ಪಾಟೀಲ್.—ಇದುವರೆವಿಗೂ 3-4 ಜನ ಸದಸ್ಯರು ಕಾನೂನಿನ ವಿಷಯವಾಗಿ ಮಾತನಾಡಿದ್ದಾರೆ. ಮಾನ್ಯ ಬಂಗಾರಪ್ಪನವರು ಏಕೆ ನಿಲುವಳಿ ಸೂಚನೆ ಕೊಟ್ಟರು ಎನ್ನುವ ವಿಷಯ ಬಂದಾಗ, ಕಾನೂನಿನ ವಿಷಯ ಬಂದು ಪಾಯಿಂಟ್ ಆಫ್ ಆರ್ಡರ್ ಮೇಲೆ ಅನೇಕ ತೊಡಕುಗಳನ್ನು ತಮ್ಮ ಮುಂದೆ ಇಟ್ಟರು. ಇವತ್ತು ಕೌಲ್ ಅಂಡ್ ಶಕ್ಧರ್ ನೋಡಿದರೂ ಕೂಡಾ ನಮ್ಮ ನಿಯಮಾವಳಿಗಳನ್ನು ನೋಡಿದರೂ ಕೂಡಾ ಎಲ್ಲೆಲ್ಲಿ ನಿಯಮಗಳಲ್ಲಿ ಅಂಬಿಗ್ಯೂಟಿ ಇರುತ್ತದೆಯೋ ಅಲ್ಲಿ ಈ ಪ್ರೋಸೀಜರ್ ಫಾಲೋ ಮಾಡಬೇಕು. ನಮ್ಮ ಸದನದ ನಿಯಮ ಸ್ಪಷ್ಟವಾಗಿದೆ. ಮಾನ್ಯ ಬೊಮ್ಮಾಯಿಯವರೂ ಈ ಮಾತನ್ನು ಒಪ್ಪುತ್ತಾರೆಂದು ನಾನು ತಿಳಿದುಕೊಳ್ಳುತ್ತೇನೆ. ಈ ಬಗ್ಗೆ ವಾದಕ್ಕೆ ಹೋಗುವುದು ಬೇಡ. ಯಾವುದೇ ಒಂದು ನಿರ್ಣಯವನ್ನು ವಿರುದ್ಧವಾಗಿ ಕೊಡಬೇಕಾದರೆ ಆ ನಿರ್ಣಯವನ್ನು ಯಾರ ವಿರುದ್ಧ ಕೊಡುತ್ತಾರೋ ಅವರನ್ನು ಕೇಳಬೇಕೆಂದು ಪದ್ಧತಿ ಇದೆ. ಅದನ್ನು ತಮಗೆ ಹೇಳಬೇಕಾಗಿಲ್ಲ ನಾನು Rules of natural justice. ಕಡೆಗೆ ತಮ್ಮ ಗಮನವನ್ನು ಹರಿಸುವುದು ಅನಾವಶ್ಯಕ. ಏಕೆಂದರೆ ತಾವು ಹೃದಯಾನ್ವಿತ ಲಾಯರ್ ಇದ್ದೀರಿ. ಆ ದೃಷ್ಟಿಯಿಂದ ನೀವು ನ್ಯಾಯ ಕೊಡಬೇಕೆಂದು ಹೇಳುತ್ತೇನೆ. ಇವತ್ತು ಬೊಮ್ಮಾಯಿಯವರೂ ಕೂಡಾ ದೊಡ್ಡ

ಮನಸ್ಸು ಮಾಡಿ ನಿರ್ಣಯದಲ್ಲಿ ಈ ಅಂಶವನ್ನು ಅಳವಡಿಸಿಕೊಂಡಿದ್ದಾರೆ. ಇಲ್ಲಿ ಲಾ ಅಂಡ್ ಆರ್ಡರ್ ಪ್ರಶ್ನೆ ಅಷ್ಟೇ ಅಲ್ಲ. ಪ್ರಾಮುಖ್ಯವಾಗಿರುವುದು there is a failure on the part of the Government. They have not at all sensed through intelligencewhatever that has happended there ಎನ್ನುವ ಪ್ರಶ್ನೆ ಇದೆ. ಇಂತಹ ಗಂಭೀರವಾದ ಪ್ರಶ್ನೆಯನು ಸದನದ ಒಳಗೆ ಚರ್ಚೆ ಮಾಡದೇ ಇದ್ದರೆ ಏಕೆ ಈ ಸದನ ಇರಬೇಕು ? ಬರೀ ಆರ್ಡಿನೆನ್ಸ್ ವಿಚಾರದಲ್ಲಿ ಸೀಲ್ ಆಫ್ ಪ್ರೂವಲ್ ತೆಗೆದುಕೊಳ್ಳುವುದಕ್ಕೆ ಇದು ಇರಬೇಕೇ? ನಾವು ಸರ್ಕಾರವನ್ನು ಕೆಟ್ಟ ಮನಸ್ಸಿನಿಂದಟೀಕೆ ಮಾಡುವುದಕ್ಕೆ ಹೊರಟಿಲ್ಲ. ನೀವು ಛಲೋ ಕೆಲಸ ಮಾಡಿದರೆ ಛಲೋ ಮಾಡಿದ್ದೀರೆಂದು, ಕೆಟ್ಟದ್ದನ್ನು ಮಾಡಿದರೆ ಕೆಟ್ಟದ್ದನ್ನು ಮಾಡಿದ್ದೀರಿ ಎಂದು ಹೇಳುತ್ತೇವೆ. ನಾವು ಕರೋರೆ ಪಾಕ್ಯಗಳಿಂದ ನಿಮ್ಮನ್ನು ಬೈದರೆ ಅದರಿಂದ ನಿಮಗೇ ಅನುಕೂಲವಾಗುತ್ತದೆ, ತಿಳಿದುಕೊಳ್ಳುವುದಕ್ಕೆ ಬರುತ್ತದೆ. ಈ ದಿನ ತಾವು ಅದನ್ನೂ ಗಮನ ಸೆಳೆವ ಸೂಚನೆಗೆ ಕನ್ವರ್ಟ್ ಮಾಡಿದ್ದೀರಿ. ಇದರಲ್ಲಿ ಏನೋ ಗಂಭೀರತೆ ಇದೆ ಎಂದು ತಿಳಿದೇ ಆ ಕೆಲಸ ಮಾಡಿದ್ದೀರಿ. ಈ ವಿಷಯ ಗಮನ ಸೆಳೆವ ಸೂಚನೆ ಮೂಲಕ ಪ್ರಸ್ತಾಪ ಆಗಲು ಏನೂ ಉಳಿದಿಲ್ಲ. ಕಾರಣ ಎಲ್ಲಾ ಪತ್ರಿಕೆಗಳಲ್ಲೂ ಎಷ್ಟು ಜನ ಸತ್ತಿದ್ದಾರೆ, ಏನು ಆಗಿದೆ ಎಂಬುದೆಲ್ಲಾ ಬಂದುಬಿಟ್ಟಿದೆ. ಮಂತ್ರಿಗಳೂ ಅದನ್ನೇ ಇಲ್ಲಿ ಹೇಳುತ್ತಾರೆ. ಇದು ಕಾಲಿಂಗ್ ಅಟೆನ್‌ಷನ್ ಪ್ರಶ್ನೆ ಅಲ್ಲ. ಇಲ್ಲಿ ಗಂಭೀರ ಪ್ರಶ್ನೆ ಏನೆಂದರೆ there is a total failure on the part of the Government to sense it through intelligence ಈ ಪ್ರಶ್ನೆ ಇದೆ. ಅದಕ್ಕೆ ಮಾನ್ಯ ಬೊಮ್ಮಾಯಿಯವರು ಕೂಡಾ ಈ ವಿಷಯವನ್ನು ನಾಳೆ ತೆಗೆದುಕೊಳ್ಳುತ್ತೇವೆಂದು ಒಪ್ಪಿದ್ದಾರೆ. ತಾವು ತಮ್ಮ ನಿರ್ಣಯವನ್ನು ಸದನದ ಒಳಗೂ ಹಾಗೂ ತಮ್ಮ ಕೊಠಡಿಯಲ್ಲೂ ಬದಲಾವಣೆ ಮಾಡ ಬಹುದು. Hon. Speaker's Chamber is also part and parcel of this House. ಇದು ಬೇರೆ ಯಾರ ಮನೆಯೂ ಅಲ್ಲ. ಏಕೆ ಹೇಳುತ್ತಿದ್ದೇನೆಂದರೆ, ಇಂತಹ ಮಹತ್ವದ ವಿಷಯವನ್ನು ವಿರೋಧ ಪಕ್ಷದವರು ಪ್ರಸ್ತಾಪಿಸದೆ ಇದ್ದರೆ ನಮ್ಮ ಬಗ್ಗೆ ಜನಾಭಿಪ್ರಾಯ ಏನಾದೀತು ? ಅದನ್ನು ಲಕ್ಷ್ಯದಲ್ಲಿ ಇಟ್ಟುಕೊಂಡು ಹೇಳುತ್ತಿದ್ದೇನೆ. ತಾವು custodian of the entire House. ಇದರಲ್ಲಿ ತಾವು ಹೆಚ್ಚು ಗಮನವನ್ನು ವಿರೋಧಪಕ್ಷದವರ ಹಕ್ಕನ್ನು ರಕ್ಷಣೆ ಮಾಡುವುದಕ್ಕೆ ಕೊಡಬೇಕೆಂದು ಹೇಳುತ್ತೇನೆ. ಈ ಬಗ್ಗೆ ಇವೊತ್ತು ಅಲ್ಲದಿದ್ದರೆ ನಾಳೆ ವಿಚಾರ ಮಾಡಿ. ತಮ್ಮ ಛೇಂಬರ್‌ನಲ್ಲಿ ಮಾಡಿದೆ ಎಂದು ಹೇಳುವುದಕ್ಕಿಂತಲೂ ತಾವು ಒಂದು ನಿರ್ಣಯವನ್ನು ಕೊಟ್ಟು ತಮ್ಮ ನಿಯಮ ಬದಲಾವಣೆ ಮಾಡಿ. ಈ ವಿಷಯ ಕಾಲಿಂಗ್ ಅಟೆನ್‌ಷನ್ ಮುಖಾಂತರ ಬಂದರೂ ಸಬಾಸ್ಟಾಂಟೀವ್ ಮೋಷನ್ ಎಂದು ಮೂವ್ ಮಾಡುವುದಕ್ಕೆ ಬರುತ್ತದೆ. ಆದಕ್ಕೆ ಹೆಚ್ಚು ಸಮಯ ಹೋಗುತ್ತದೆ. ಇದು ಅಡ್‌ಜರ್ನ್‌ಮೆಂಟ್ ಮೋಷನ್ ಆದರೆ ಎರಡೂ ಭಾಗದ ಸದಸ್ಯರಿಗೂ ಒಳ್ಳೆಯದಾಗುತ್ತದೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ನಾವೂ ಒಂದು ಲೆಟರ್ ಕೊಟ್ಟಿದ್ದೇವೆ.

ಅಧ್ಯಕ್ಷರು.—ನೀವೂ ಸಾಕಷ್ಟು ಹೇಳಿದ್ದೀರಿ. ನಾಳೆ ಬೇಕಾದರೆ ಒಬ್ಬಿಬ್ಬರನ್ನು ಕರೆಯಿಸಿಕೊಳ್ಳುತ್ತೇನೆ. ಮಾನ್ಯ ಬೊಮ್ಮಾಯಿಯವರು ಹೇಳಿದ್ದನ್ನೂ ವಿಚಾರ ಮಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ರಾಹುಂಗನಗರದಲ್ಲಿ ನಡೆದಂತಹ ಘಟನೆ ಬಗ್ಗೆ ನಾವೂ ಕೂಡಾ ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ಪತ್ರವನ್ನು ಬರೆದಿದ್ದೇವೆ. ಅದರಲ್ಲಿ ನಾವೂ ಚರ್ಚೆಗೆ ಭಾಗ ವಹಿಸುವುದಕ್ಕೆ ಅವಕಾಶ ಮಾಡಿಕೊಟ್ಟರೆ ಒಳ್ಳೆಯದಾಗುತ್ತದೆ.

ಅಧ್ಯಕ್ಷರು.—ಇದರಲ್ಲಿ ಗಂಭೀರತೆ ಇಲ್ಲ ಎಂದು ನಾನು ಒಪ್ಪುವುದಿಲ್ಲ. ಪಾಟೀಲರೇ, ಗಂಭೀರತೆ ಇದ್ದುದಕ್ಕೇ ನಾನು ಹೇಳುತ್ತಿದ್ದೇನೆ.

> "In an appropriate case the Speaker may admit a calling attention notice in lieu of the notice of an adjournment motion, either on the same day or on subsequent day depending upon the nature and urgency of the matter"

ಆ ಒಂದು ದೃಷ್ಟಿಯಿಂದ ನಾನು ಹೇಳಿದೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ಈ ಬಗ್ಗೆ.....

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ನೀವು ಈ ಬಗ್ಗೆ ಚೇಂಬರ್‌ಗೆ ಬರುವುದು ಅವಶ್ಯ ಇಲ್ಲ ಇನ್ನೂ ಒಬ್ಬಿಬ್ಬರು ಹಿರಿಯ ಸದಸ್ಯರನ್ನು ಕರೆಯಿಸಿ ನೋಡಿಕೊಳ್ಳುತ್ತೇನೆ. In the interest of the House as well as in the interest of the public ಏನು ಮಾಡಬೇಕು ಎನ್ನುವುದನ್ನು ತಿಳಿದುಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನಮ್ಮದು ಏನೂ ಇಲ್ಲ.

ಅಧ್ಯಕ್ಷರು.—ಅವರೂ ಒಪ್ಪಿದ್ದಾರೆ. ನಾನೂ ಒಪ್ಪಿದ್ದೇನೆ.

(ಗೊಂದಲ)

ಅಧ್ಯಕ್ಷರು.—ಬಂಗಾರಪ್ಪನವರೇ ನಾವು ನಿಮಗೆ ಅವಕಾಶ ಕೊಡಬೇಕೆಂದಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಹೇಳಿದ್ದನ್ನು ನಾವು ಒಪ್ಪುತ್ತಿದ್ದೇವೆ. ತಾವು ಅರ್ಥ ಮಾಡಿಕೊಂಡು ಇದನ್ನು ಗಮನಸೆಳೆಯುವ ಸೂಚನೆಯನ್ನಾಗಿ ಪರಿವರ್ತಿಸಿದ್ದೀರಿ. ಇದರ ಮಹತ್ವ ತಮಗೆ ಅರ್ಥವಾಗದೆ. ಈಗ ರೀಕನ್ಸಿಡರ್ ಮಾಡಬಹುದು.

ಅಧ್ಯಕ್ಷರು.—ಈ ವಿಷಯವನ್ನು ಕಾಲಿಂಗ್ ಅಟೆನ್‌ಷನ್ ಆಗಿ ಇವತ್ತೇ ತೆಗೆದುಕೊಳ್ಳಬೇಕೆಂಬ ಇಚ್ಛೆ ನನಗೆ ಇತ್ತು. ಆದರೆ ಗೃಹಮಂತ್ರಿಗಳು ಊರಲ್ಲಿ ಇಲ್ಲ ಎಂದು ತಿಳಿದುಬಂತು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ—ಕಾಲಿಂಗ್ ಅಟೆನ್‌ಷನ್‌ನಲ್ಲಿ ಇದು ಬಗೆಹರಿಯಂವುದಿಲ್ಲವೆಂದು ಹೇಳಿ ರೀಕನ್ಸಿಡರ್ ಮಾಡಿದರೂ ಏನೂ ತಪ್ಪಿಲ್ಲ.

ಅಧ್ಯಕ್ಷರು.—ಈಗ ಕೆ.ಎಚ್.ಪಾಟೀಲರ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ.

ಶ್ರೀ ಎಸ್. ಬಂಗಾರಪ್ಪ.—ಈಗ ತಾವು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೀರಿ. ಮಾನ್ಯ ಬೊಮ್ಮಾಯಿಯವರೂ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು— ರೀ-ಕನ್ಸಿಡರ್ ಮಾಡುವ ಬಗ್ಗೆ I will let you know ಎಂದು ಹೇಳಿದ್ದೇನೆ. ಈ ವಿಷಯದ ಗಂಭೀರತೆಯನ್ನು ತಿಳಿದುಕೊಂಡೇ, ಇದನ್ನು ಗಮನ ಸೆಳೆಯುವ ಸೂಚನೆಯನ್ನಾಗಿ ಪರಿವರ್ತಿಸಿ, ಇವತ್ತೇ ತೆಗೆದುಕೊಳ್ಳಬೇಕೆಂದಿದ್ದೆ. ಆದರೆ ಗೃಹ ಮಂತ್ರಿಗಳು ಇಲ್ಲ. ಇವತ್ತು ಈ ವಿಚಾರವನ್ನು ತೆಗೆದುಕೊಳ್ಳುವುದು ಬೇಡ, ನಮಗೆ ಅವಕಾಶ ಕೊಡಿ, ಇದರಲ್ಲಿ ಪೈ಼ಮಾಫೇಸಿ ಕೇಸ್ ಇದೆ ಎನ್ನುವುದನ್ನು ಆರ್ಗ್ಯುಮೆಂಟ್ ಮಾಡಿ ತೋರಿಸುತ್ತೇವೆಂದು ಹೇಳಿದರು. ಇದರ ಬಗ್ಗೆ ತಾವುಗಳು ನಮ್ಮ ಚೇಂಬರ್‌ಗೆ ಬರಬಹುದು ಅಥವಾ ಬರದೇ ಇದ್ದರೂ ಅಡ್ಡಿ ಇಲ್ಲ. ನಾನು ಒಂದಿಬ್ಬರನ್ನು, ವೀರಪ್ಪ ಮೊಯ್ಲಿಯವರನ್ನು ಕರೆಸುತ್ತೇನೆ. ನನಗೆ ಅವರಿಂದ ಕನ್ವಿನ್ಸ್ ಆಗಲಿ. ಆಮೇಲೆ ಅದನ್ನು ನೋಡೂತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಬಹಳ ಸಂತೋಷ. ತಾವು ಒಂದಿಬ್ಬರನ್ನು ಕರೆಯಿಸಿಕೊಂಡು ಮಾತನಾಡಿ, ತಾವು ತೀರ್ಮಾನವನ್ನು ತೆಗೆದುಕೊಳ್ಳಿ.

ಅಧ್ಯಕ್ಷರು.—ನಾನು ನಿಮ್ಮನ್ನೂ ಕರೆಯುತ್ತೇನೆ. ಪ್ರೇಮ ಇರುವವರು ಬನ್ನಿ.

ಶ್ರೀ ಎಸ್. ಬಂಗಾರಪ್ಪ.—ಬಹಳ ಸಂತೋಷ. ನೀವು ಕರೆದರೆ ನಾವೂ ಕೂಡಾ ಬರುತ್ತೇವೆ. ಈ ವಿಷಯ ಮಾತನಾಡುವುದಕ್ಕೋಸ್ಕರ ಕರೆದರೆ ಬರುವುದಕ್ಕಾಗುವುದಿಲ್ಲ ಎಂದು ಹೇಳಿದೆ.

ಅಧ್ಯಕ್ಷರು,—ಇದು ಚರ್ಚೆಯ ಪ್ರಶ್ನೆಯಲ್ಲ. ನನಗೆ ಕನ್ವಿನ್ಸ್ ಮಾಡಬೇಕಲ್ಲವೇ ? ಏಕೆಂದರೆ, ತಾವುಗಳೆಲ್ಲಾ ಅನುಭವಿಗಳಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಬೊಮ್ಮಾಯಿಯವರು ಫಸ್ಟ್ ಪಾರ್ಟ್‌ನ್ನು ಬಹಳ ಚೆನ್ನಾಗಿ ಮಾತನಾಡಿದರು. ಆದರೆ ಸೆಕೆಂಡ್ ಪಾರ್ಟ್‌ಗೆ ಬಂದ ತಕ್ಷಣ ಸ್ವಲ್ಪ ಬದಲಾವಣೆ ಆದರು, You are a ware as a seasoned politician, ನಾವು ಸದನದಲ್ಲಿ ಚರ್ಚೆ ಮಾಡಿದರೆ ಅದು ಕರ್ನಾಟಕ ರಾಜ್ಯದ ಜನತೆಗೆ ಗೊತ್ತಾಗುತ್ತದೆ, ಈ ಸದನ is meant for that. I hope

you don't have second thought about this. ಆ ದೃಷ್ಟಿಯಿಂದ ಹೇಳುತ್ತಿದ್ದೇನೆಯೇ ಏನಃ ಅಧ್ಯಕ್ಷರ ಚೇಂಬರ್‌ಗೆ ಹೋಗುವುದು ಬರುವುದು, ಆ ವಿಷಯ ಬೇರೆ. ನಾವೂ ಅಧ್ಯಕ್ಷರೂ ಅಕ್ಕ ಪಕ್ಕದ ತಾಲ್ಲೂಕಿನವರು. ಅರ್ಜೆಂಟ್ ಇದ್ದರೆ ಮಂತ್ರಿಗಳಿಗಿಂತ ಮೊದಲೇ ನಾನು ಅಲ್ಲಿ ಹೋಗಿರತ್ತೇನೆ ಹೋಗಬಾರದು ಎನ್ನುವ ಅಭಿಪ್ರಾಯ ಇಲ್ಲ. ಈಗಾಗಲೇ ಹೇಳಿದಂತೆ ಈ ವಿಷಯದ ಬಗ್ಗೆ ಚರ್ಚೆ ಯಾಗಲು ಅನುಕೂಲವಾಗುವಂತೆ ಅವಕಾಶವನ್ನು ಈ ಸದನದಲ್ಲಿ ಕಲ್ಪಿಸಿಕೊಟ್ಟರೆ ಬಹಳ ಸಂತೋಷ ವೆಂದು ನಾನು ಹೇಳಬಯಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್—ಮಾನ್ಯ ಅಧ್ಯಕ್ಷರೇ, ನಾನೂ ತಮಗೆ ಒಂದೂ ನೋಟೀಸನ್ನು ಕಳುಹಿಸಿ ಕೊಟ್ಟಿದ್ದೆ. ಅದು ಏನಾಯಿತು ? ಅದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರೆಂಬುದನ್ನು ಹೇಳಬೇಕು. ಅದೂ ಕೂಡ ಇದರಂತೆಯೇ ಬಹಳ ಗಂಭೀರವಾದ ಪ್ರಶ್ನೆ. ಇಷ್ಟೇ ಗಂಭೀರತೆ ಅದಕ್ಕೂ ಇದೆ.

ಅಧ್ಯಕ್ಷರು.—ನನ್ನ ಚೇಂಬರ್‌ಗೆ ನೀವೂ ಕೂಡ ಬನ್ನಿ ನೋಡೋಣ.

ಶ್ರೀ ಕೆ. ಬಿ ಶಾಣಪ್ಪ.—ಮಾನ್ಯ ಅಧ್ಯಕ್ಷರೇ, ಇದೇ ವಿಷಯದ ಮೇಲೆ ನಾನೂ ಒಂದು ನೋಟೀಸನ್ನು ಕಳುಹಿಸಿ ಕೊಟ್ಟಿದ್ದೆ. ಅದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ?

ಅಧ್ಯಕ್ಷರು.—ಅದೇನು ಎಂಬುದನ್ನು ನೋಡೋಣ. ದಯವಿಟ್ಟು ಈಗ ಕುಳಿತುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ಅಲೆಂಬಿಕ್‌ನ ಕಾರ್ಮಿಕರು ಸುಮಾರು ೯೦೦ ಜನರು ಪ್ರದರ್ಶನ ಬಂದು ಇಲ್ಲಿ ಹೊರಗೆ ಕುಳಿತಿದ್ದಾರೆ. ಅನ್ನವಿಲ್ಲದೇ ಅವರು ಸಾಯುತ್ತಿದ್ದಾರೆ ಅಲ್ಲಿ ಸತ್ತಿರುವ ಕಾರ್ಮಿಕರ ಬಗ್ಗೆ ನಾವು ಚರ್ಚೆ ಮಾಡಲು ಅವಕಾಶ ಕೊಡಬೇಕೆಂದು ತಮ್ಮನ್ನು ಕೇಳುತ್ತಿದ್ದೇವೆ...

ಅಧ್ಯಕ್ಷರು.—ಈ ವಿಷಯವನ್ನು ನಾಳೆ ಮಧ್ಯಾಹ್ನ ತೆಗೆದುಕೊಳ್ಳೋಣ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರೊಬ್ಬರು ಮಾನ್ಯ ನಾರಾಯಣಕುಮಾರ್‌ರವರ ಬಗ್ಗೆ ಮಾತನಾಡಿ ಅವರನ್ನು *** ಎಂದು ಹೇಳಿದರು. ಅದು ರೆಕಾರ್ಡ್‌ಗೆ ಹೋಗಿದೆ. ಆ ಪದಗಳನ್ನು ತೆಗೆದುಹಾಕಬೇಕು.

ಶ್ರೀ ಕೆ ಹೆಚ್. ಪಾಟೀಲ್.—ಇದನ್ನು ನೀವು ಏತಕ್ಕೆ ಹೇಳುತ್ತಿದ್ದೀರಿ ? ಮಾನ್ಯ ನಾರಾಯಣ ಕುಮಾರ್‌ರವರೇ ಎದ್ದುನಿಂತು ನಾನು *** ಎಂದು ಹೇಳುವುದಕ್ಕೆ ಅವರಿಗೆ ಅಧಿಕಾರ ಇದೆ. ಆದ್ದರಿಂದ ಅವರೇ ಹೇಳಿಕೊತ್ತಾರೆ.

ಗಮನ ಸೆಳೆಯುವ ಸೂಚನೆ

(i) ಭೂನ್ಯಾಯಂ ಮಂಡಳಿಗಳಲ್ಲಿ ಗೇಣಿದಾರರ ವಿರುದ್ಧ ತೀರ್ಮಾನಕ್ಕೆ ಹೈಕೋರ್ಟಿಗೆ ಅರ್ಜಿ ಸಲ್ಲಿಸಿರುವುದು

ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಮಾನ್ಯ ಅಧ್ಯಕ್ಷರೇ, ಭೂನ್ಯಾಯ ಮಂಡಳಿಗಳಲ್ಲಿ ಗೇಣಿದಾರರ ವಿರುದ್ಧವಾಗಿ ತೀರ್ಮಾನವಾಗಿರುವ ಪ್ರಕರಣಗಳಲ್ಲಿ ಕರ್ನಾಟಕ ಹೈಕೋರ್ಟ್‌ಗೆ ರಿಟ್ ಅರ್ಜಿಯನ್ನು ಸಲ್ಲಿಸಿರುವ ಬಗ್ಗೆ ಮಾನ್ಯ ಕಂದಾಯ, ಯೋಜನೆ ಮತ್ತು ಕಾರ್ಮಿಕ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಹಾಗೂ ಯೋಜನಾ ಖಾತೆ ಸಚಿವರು),—ಮಾನ್ಯ ಅಧ್ಯಕ್ಷರೇ, ಭೂನ್ಯಾಯ ಮಂಡಳಿಗಳಲ್ಲಿ ಬಡ ಗೇಣಿದಾರರ ವಿರುದ್ಧ ತೀರ್ಮಾನವಾಗಿರುವ ಅರ್ಹ ಪ್ರಕರಣಗಳಲ್ಲಿ ಸರಕಾರದವರು ಕರ್ನಾಟಕ ಹೈಕೋರ್ಟ್‌ನಲ್ಲಿ ರಿಟ್ ಸಲ್ಲಿಸುವ ಮೂಲಕ ಸಹಾಯ ಮಾಡಲು ಕರ್ನಾಟಕ ಭೂ ಸುಧಾರಣೆ ಕಾಯ್ದೆ ೧೯೬೧ರ ಕಲಂ ೧೨೭ರ ಪ್ರಕಾರ ಅವಕಾಶವಿದೆ.

---

* Expunged as ordered by the Chair